
ನವಸಾಕ್ಷರ ಪುಸ್ತಕ ಮಾಲೆ ೩೨

ಕನಸುಗಳು

ಎ.ಆರ್. ನಿರುಪಮಾ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೩೨

ಕನಸುಗಳು

ಎ. ಆರ್. ನಿರುಪಮಾ

ಪ್ರಸಾರಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ ೫೮೩ ೨೭೭

KANASUGALU : By A. R. Nirupama ,Published by the Director of Prasaranga, Kannada University, Hampi - 583 211, Karnataka.
First Impression 1994, Pp. ii + 26 Rs. 8-00

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮-೦೦

ಮುದ್ರಕರು
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು - ೧೮
ದೂರವಾಣಿ : ೬೬೧೩೧೨೩

ಕನಸುಗಳು

ಆಹಾ ಒಳ್ಳೆಯ ಕನಸು..... ಅಯ್ಯೋ ಕೆಟ್ಟ ಕನಸು

ನನ್ನ ಹೆಸರು ಕಮಲ. ನನಗೆ ನಿಮ್ಮ ಜೊತೆ ಕನಸುಗಳ ವಿಷಯ ಮಾತಾಡಬೇಕು ಎಂದು ಆಸೆ. ಈಚೆಗೆ ನಾನು ಆ ವಿಷಯ ಓದಬೇಕಾಗಿ ಬಂತು. ಅದಕ್ಕೆ ಕಾರಣ ನನ್ನ ಮಗಳು ಮಂಗಳಾ. ಅವಳು ಎಂಟು ವರ್ಷದ ಚೂಟೀ ಹುಡುಗಿ. ಓದು ಅಂದಕೂಡಲೇ ಬರದೇ ಇರುವ ನಿದ್ದೆಯನ್ನು ಎಳೆದು ತಂದುಕೊಂಡು ಮಲಗಿ ಬಿಡುತ್ತಾಳೆ. ಒಂದು ದಿನ ರಾತ್ರಿ ಒಂಬತ್ತು ಗಂಟೆಗೆ ಹೀಗೇ ಮಲಗಿದ್ದಳು. ನಾನು ಅವಳ ಕೋಣೆಯೊಳಗೆ ಹೋದೆ. ಒಂದು ನಿಮಿಷ ಅವಳ ಕಡೆಗೆ ನೋಡಿದೆ. ನನಗೆ ಅವಳ ನಿದ್ದೆ ಮಾಡುತ್ತಿಲ್ಲ ಅನ್ನಿಸಿತು. ಏಕೆಂದರೆ ಅವಳ ಕಣ್ಣರೆಪ್ಪೆಗಳು ಅಲ್ಲಾಡುತ್ತಿದ್ದವು. ಒಳಗಿನ ಗುಡ್ಡೆಗಳು ಏನನ್ನೋ ನೋಡುತ್ತಿರುವಂತೆ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಓಡಾಡುತ್ತಿದ್ದವು. ನಾನು ''ಕಳ್ಳಿ! ನಾಟಕ ಆಡುತ್ತಾ ಇದ್ದಾಳೆ.'' ಅಂದುಕೊಂಡೆ. ಅವಳನ್ನು ಬೈದು ಎಬ್ಬಿಸಿದೆ. ಅವಳು ಎದ್ದು ಕಣ್ಣುಜ್ಜಿಕೊಳ್ಳುತ್ತಾ ''ಥೂ, ಹೋಗಮ್ಮಾ ಎಂಥಾ ಚೆನ್ನಾಗಿರೋ ಕನಸು

ಹಾಳು ಮಾಡಿಬಿಟ್ಟೆ'' ಎಂದಳು. ನನಗೆ ನಂಬಿಕೆ ಬರಲಿ ''ಏನೇ ಮಂಗಳಾ, ನಿಜಕ್ಕೂ ಕನಸು ಬಿತ್ತೇನೇ?'' ಅಂತ ಕೇಳಿದೆ. ಅವಳು ತನ್ನ ಕನಸನ್ನು ಈ ರೀತಿ ಹೇಳಿಕೊಂಡಳು:

''ನೋಡಮ್ಮಾ, ನಾವೆಲ್ಲಾ ಅಂದ್ರೆ... ನಾನು, ಲತಾ, ಪಮ್ಮಿ, ಸಾರಾ, ಪುಟ್ಟಿ ಆಟಾ ಆಡ್ತಾ ಇದ್ದೆವು. ಕಣ್ಣಾಮುಚ್ಚಾಲೆ ಆಟ. ಲತಾ ಕಣ್ಣು ಮುಚ್ಚಿಕೊಂಡು ಐವತ್ತು ಎಣಿಸಿದ್ಳು. ನಾನು ಓಡಿ ಹೋಗಿ ದೂ..ರದಲ್ಲಿರೋ ಗಿಡಗಳ ಮಧ್ಯೆ ಬಚ್ಚಿಟ್ಟುಕೊಂಡಿದ್ದೆ. ಇನ್ನೇನು ಲತಾ ಬರ್ತಾಳೆ. ನನ್ನ ಹಿಡೀತಾಳೆ ಅಂತಾ ಕಾಯ್ತಾ ಇರೋವಾಗ, ಮಂಗಳಾ ... ಅಂತ ಯಾರೋ ಕರೆದ ಹಾಗಾಯ್ತು. ನೋಡಿದ್ರೆ ಪಂಚರಂಗಿ ಗಿಳಿ. ಭಾರಿ ದೊಡ್ಡದು! ಏನೆಲ್ಲಾ ಬಣ್ಣಗಳು ಇದ್ದವು! ''ನನ್ನ ಜೊತೆ ಬಾ'' ಅಂತ ಕರೆದು ಪೊದೆಗಳ ಮಧ್ಯೆ ಇದ್ದ ಒಂದು ಬಿಲದೊಳಗೆ ಇಳಿಯೋದಕ್ಕೆ ಶುರುಮಾಡ್ತು. ನಾನು ಅದರ ಹಿಂದೇನೇ ಹೋದೆ. ಇಳಿದು ನೋಡಿದ್ರೆ ಅಲ್ಲೊಂದು ತೋಟ. ಮಧ್ಯೆ ಅರಮನೆ. ತೋಟದ ಗಿಡಗಳ ತುಂಬಾ ಹಣ್ಣು, ಹೂವು! ಪಾಪ, ಆ ಗಿಳೀಗೆ ರೆಕ್ಕೆಯಲ್ಲಿ ಒಂದು ಮುಳ್ಳು ಚುಚ್ಚಿತ್ತು. ನನಗೆ ''ಇದನ್ನು ಕೀಳು''ಅಂತ ಹೇಳ್ತು. ನಾನು ಹಾಗೇ ಮಾಡಿದೆ. ಕೂಡಲೇ ಆ ಗಿಣಿ ಒಬ್ಬ ರಾಜಕುಮಾರಿ ಆಗಿಬಿಟ್ಟಳು. ನನ್ನ ಮಡಿಲು ತುಂಬಾ ಹಣ್ಣು ತುಂಬಿಸಿ, ರಥದಲ್ಲಿ ಕೂಡಿಸಿಕೊಂಡು ಆಕಾಶ ಎಲ್ಲಾ ಸುತ್ತಾಡಿಸಿ ಕೊನೆಗೆ ಇಲ್ಲಿಗೆ ತಂದು ಬಿಟ್ಟಳು. ನಾನು ಅಲ್ಲಿಂದ ತಂದ ಹಣ್ಣನ್ನು ಲತಾ, ಪಮ್ಮಿ, ಸಾರಾ ಅವರಿಗೆಲ್ಲಾ ಕೊಟ್ಟು, ನಾನೂ ತಿನ್ನೋ ಹೊತ್ತಿಗೆ.... ಥೂ ಹೋಗಮ್ಮಾ ಎಬ್ಬಿಸಿ ಬಿಟ್ಟೆ''.

ಹೀಗೆ ಸುಮಾರು ಹೊತ್ತು ತನ್ನ ಒಡೆದ ಕನಸಿನ ಬಗ್ಗೆ ಮಾತಾಡಿದ ಮಂಗಳಾ ತಡವಾಗಿ ನಿದ್ದೆ ಹೋದಳು. ಮಾರನೇ ದಿನ ಎದ್ದದ್ದೂ ತಡವಾಗಿಯೇ. ಹೊಸ ದಿನ ಹುಟ್ಟಿದರೂ ಕೆಲಸಗಳಂತೂ ಹಳೆಯವೇ ತಾನೇ! ಅವತ್ತು ಮಂಗಳಾ

ಶಾಲೆಮುಗಿಸಿ ಮನೆಗೆ ಬಂದು ಮುಖ ಊದಿಸಿಕೊಂಡು ಕುಳಿತಿದ್ಲು. ಯಾಕೇಂದ್ರೆ ಅಣ್ಣನ ಜೊತೆ ಜಗಳ ಆಡಿದ್ದು, ಅವನು ಇವಳ ಪೆನ್ನು ಮುರಿದದ್ದು, ಜಡೆ ಎಳೆದದ್ದು, ದೂಡಿ ಬೀಳಿಸಿದ್ದು, ಒಬ್ಬಳನ್ನೇ ಬಿಟ್ಟು ಮನೆಗೆ ಓಡೋಡಿ ಬಂದದ್ದು.... ಒಂದೇ ..ಎರಡೇ ...ಎಲ್ಲದರ ವರದೀನೂ ಒಪ್ಪಿಸಿದಳು.

ಯಥಾ ಪ್ರಕಾರ ರಾತ್ರಿ, ಮಲಗಿದ್ದ ಮಂಗಳಾನ ನೋಡಿದೆ. ನಿದ್ದೆ ಮಾಡ್ತಾ ಇದ್ದಹಾಗಿತ್ತು. ಆದರೆ ಪಾಪ, ಕಣ್ಣರೆಪ್ಪೆ, ಗುಡ್ಡೆ ಅಲುಗಾಡ್ತಾ ಇದ್ದವು. ಮೈ ಬೆವರುತ್ತಾ ಇತ್ತು..ಆ ಕಡೆ ಈ ಕಡೇ ಹೊರಳಾಡುತ್ತಾ ಇದ್ದಳು. ಜೋರು ಜೋರಾಗಿ ಉಸಿರಾಡುತ್ತಿದ್ದಳು... ನನಗೆ ಅಯ್ಯೋ! ಅನಿಸಿತು. ಪ್ರೀತಿಯಿಂದ ಅವಳ ಹಣೆ ನೇವರಿಸಿದೆ. ತಕ್ಷಣ ಅಮ್ಮಾ ....ಅಂತ ಕಿರುಚಿಕೊಂಡು ಎದ್ದು ಕೂತಳು. ನನ್ನ ನೋಡಿ ಅಪ್ಪಿಕೊಂಡಳು. ಯಾಕಮ್ಮಾ ಮಂಗಳಾ ಹೆದರಿದ್ಯಾ? ಅಂತ ಕೇಳಿದೆ. ಆಗ ಅವಳು "ನಿನ್ನ ಕೈ ನನ್ನ ಹಣೆ ಮೇಲೆ ಇದ್ದಾಗ ನನಗೆ ಒಂದು ಕೆಟ್ಟಕನಸು ಬೀಳ್ತಾ ಇತ್ತು. ಒಬ್ಬ ದೊಡ್ಡ ರಾಕ್ಷಸ. ನಾನು ಸ್ಕೂಲಿಂದ ಮನೆಗೆ ಬರ್ತಿದ್ದೆ. ಅವನು ಅಹ್ಹಹ್ಹಾ...ಅಂತ ನಗುತ್ತಾ ನನ್ನ ಅಟ್ಟಿಸಿಕೊಂಡು ಬಂದ. ನಾನು ತಪ್ಪಿಸಿಕೊಂಡು ಓಟಕಿತ್ತೆ. ಎದ್ದು ಬಿದ್ದು ದೂರ ಹೋದ ಮೇಲೆ ಹಿಂದೆ ತಿರುಗಿ ನೋಡಿದರೆ ಅವನು ಕಾಣಿಸಲಿಲ್ಲ. ಅಬ್ಬಾ, ಪೀಡೆ ತೊಲಗಿತು ಅಂದುಕೊಂಡೆ. ತಕ್ಷಣ ಹಣೆ ಮೇಲೆ ಏನೋ ಸರಿದಾಡಿದ ಹಾಗಾಯಿತು. ತಿರುಗಿ ನೋಡಿದರೆ .... ಆ ರಾಕ್ಷಸ ನನ್ನ ತಲೆ ಮುಟ್ಟುತ್ತಾ ಇದ್ದ"...

ಎಷ್ಟೋ ಹೊತ್ತು ಸಮಾಧಾನ ಮಾಡಿ ಅವಳನ್ನು ಮತ್ತೆ ಮಲಗಿಸಿದೆ. ಆದರೆ ನನಗೆ ನಿದ್ದೆ ಬರಲಿಲ್ಲ. ಈ ಎರಡೂ ರಾತ್ರಿ ನಡೆದದ್ದನ್ನು ನೆನಪು ಮಾಡಿಕೊಂಡೆ. ಈ ಕನಸುಗಳಿಗೆ ಅರ್ಥ ಏನು ಅಂತ ಯೋಚನೆ ಮಾಡಿದೆ.ಮಂಗಳ ಕಂಡ ಕನಸುಗಳ ಹಿಂದೆ ಬೇರೆ ಬೇರೆ ಉದ್ದೇಶ ಇದೆ ಅನಿಸಿತು. ನನ್ನ ಮಗಳ ಕನಸುಗಳು ನನ್ನಲ್ಲಿ ಹುಟ್ಟಿಸಿದ ಕುತೂಹಲದಿಂದ ನಾನು ಕನಸುಗಳ ವಿಷಯ ತುಂಬಾ ಓದತೊಡಗಿದೆ. ಓದಿದ್ದನ್ನು ಸಂಗ್ರಹವಾಗಿ ಬರೆದಿಟ್ಟೆ. ನಿಮಗೂ ನನ್ನ ಹಾಗೆ ಕನಸುಗಳ ಬಗ್ಗೆ ಕುತೂಹಲ ಇದೆ ಅಂತ ಅಂದು ಕೊಂಡಿದ್ದೇನೆ. ನಾನು

ಓದಿರೋದನ್ನು ನಿಮಗೆ ಹೇಳುತ್ತೇನೆ. ಹಾಗಾದರೆ ಬನ್ನಿ, ನಾವು ಕನಸುಗಳ ರಾಜ್ಯದಲ್ಲಿ ಕಾಲಿಡೋಣ.

ಏನಿದು ಕನಸು? .... ತಿಳಿಯುವ ಮನಸು

'ಕನಸು' ಅಂದೊಡನೆ ನಮಗೆಲ್ಲಾ ಬೆರಗು. ನಾವು ಮಲಗಿದ ಕಡೆಯಲ್ಲೇ ಮಲಗಿರುತ್ತೇವೆ. ಆದರೆ ಎಲ್ಲೋ ಹೋದಹಾಗೆ ಅನಿಸುತ್ತದೆ. ಏನೇನೋ ಮಾಡಿದ ಹಾಗೆ ಅನಿಸುತ್ತದೆ. ಕನಸು ಕಾಣುವಾಗ ಭಯ, ಸಂತೋಷ, ದುಃಖ, ನಿರಾಶೆ ಏನೇನೋ ಆಗುತ್ತಾ ಇರುತ್ತವೆ. ಇಲ್ಲಿ ಮಲಗಿರುವುದು ಯಾರು? ಅಲ್ಲಿ, ಕನಸಲ್ಲಿ ಏನೇನೋ ಅನುಭವ ಪಡೆಯುತ್ತಾ ಇರುವವರು ಯಾರು? ಎಂದು ಪ್ರಶ್ನೆ ಹುಟ್ಟುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕಲು ಎಷ್ಟೋ ವರ್ಷಗಳಿಂದ ಜನ ಪ್ರಯತ್ನ ಪಡುತ್ತಿದ್ದಾರೆ. ಅವರ ವಿಚಾರಗಳ ಸಾರಾಂಶವನ್ನು ಈ ರೀತಿ ಹೇಳಬಹುದು:

ಎಲ್ಲಾ ಮನುಷ್ಯರೂ ಕನಸು ಕಾಣುತ್ತಾರೆ. ಆರೋಗ್ಯವಂತರೂ ಅಷ್ಟೇ. ರೋಗಿಗಳೂ ಅಷ್ಟೇ. ಕನಸು ನಾವು ನಿದ್ದೆ ಮಾಡುವಾಗ ಮನಸ್ಸಿನಲ್ಲಿ ನಡೆಯುವ ಒಂದು ಚಟುವಟಿಕೆ. ಕನಸು ಎಂದರೆ ನಿದ್ದೆಯಲ್ಲಿ ಕಾಣುವ ನೋಟಗಳ ಸಾಲು. ಈ ನೋಟಗಳು, ಅನುಭವಗಳು ನಮ್ಮ ಅದುವರೆಗಿನ ಜೀವನದ ಭಾಗ ಆಗಿರಬೇಕೆಂಬ ನಿಯಮ ಇಲ್ಲ. ಎಂದರೆ, ನಾವು ಇದುವರೆಗೆ ಕಂಡಿರದ, ಊಹಿಸಿಯೂ ಇರದ ಸಂಗತಿಗಳನ್ನು ನಮ್ಮ ಕನಸುಗಳಲ್ಲಿ ಕಾಣಬಹುದು.

ಹೀಗೆಂದರೆ ನಮ್ಮ ಕಣ್ಣು, ಮೂಗು, ಕಿವಿ ಮುಂತಾದ ಇಂದ್ರಿಯಗಳು ಅದುವರೆಗೆ ಅನುಭವಿಸಿಲ್ಲದ ಹೊಸ ಸಂಗತಿಗಳು ಕನಸಿನಲ್ಲಿ ಬರುತ್ತವೆ ಎಂದು ಅರ್ಥವಲ್ಲ. ಬದಲಾಗಿ, ಹಳೆಯ ವಿವರಗಳೇ ಬೇರೆ ಬೇರೆ ರೀತಿಯಲ್ಲಿ

ಕೂಡಿಕೊಂಡು ಹೊಸದಾಗಿ ಕಾಣಿಸಿಕೊಳ್ಳಬಹುದು. ನಮ್ಮ ಮನಸ್ಸು ಹಳೆಯದನ್ನು ಮುರಿದು ಮತ್ತೆ ಜೋಡಿಸಿ ಹೊಸದು ಎನ್ನಿಸುವಂತೆ ಬದಲಾಯಿಸುತ್ತದೆ. ಹೀಗೆ ಮಾಡಲು ಮನಸ್ಸಿಗೆ ತನ್ನದೇ ಆದ ಕಾರಣ ಇರುತ್ತದೆ. ಆದ್ದರಿಂದ ಕನಸುಗಳಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ತೀರ್ಮಾನಿಸಲು ಸಾಧ್ಯವಿಲ್ಲ.

ನಾವು ಕಾಣುವ ಕನಸುಗಳ ಹಿಂದೆ ನಮ್ಮ ಮನಸ್ಸನ್ನು ತುಂಬಿಕೊಂಡಿರುವ ಭಾವನೆಗಳು, ಭಯಗಳು, ಆತಂಕಗಳು ಇರುತ್ತವೆ. ಕನಸಿನಲ್ಲಿ ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚು ದೃಶ್ಯಗಳಿರುತ್ತವೆ. ಅಲ್ಲಿ ಕನಸು ಕಾಣುತ್ತಿರುವವರಲ್ಲದೆ ಬೇರೆ ಬೇರೆ ಪಾತ್ರಗಳು ಇರುತ್ತವೆ. ಆ ಪಾತ್ರಗಳ ನಡುವೆ ನಡೆಯುವ ಮಾತುಕತೆ ಮತ್ತು ಕ್ರಿಯೆಗಳು ನಮಗೆ ಗೋಚರವಾಗುತ್ತವೆ. ಕನಸು ಹೆಚ್ಚು ಕಡಿಮೆ ಒಂದು ಚಲನಚಿತ್ರದಂತೆ ಅಥವಾ ನಾಟಕದಂತೆ ಇರುತ್ತದೆ. ತಮಾಷೆಯೆಂದರೆ ಇಲ್ಲಿ ಕನಸು ಕಾಣುತ್ತಿರುವವನು ಪಾತ್ರಧಾರಿಯೂ ಹೌದು. ನೋಡುವವನೂ ಹೌದು. ಒಂದು ಅರ್ಥದಲ್ಲಿ ಕನಸುಗಳು ಭ್ರಮೆಗಳಿದ್ದ ಹಾಗೆ. ಏಕೆಂದರೆ ಕನಸಿನಲ್ಲಿ ನಡೆಯುವ ಯಾವ ಘಟನೆಗಳೂ ನಿಜವಾಗಿ ನಡೆಯುತ್ತಿರುವುದಿಲ್ಲ. ಆದರೂ ಕನಸು ಕಾಣುತ್ತಿರುವವನು ಅದೆಲ್ಲವೂ ನಿಜ ಎನ್ನುವ ಹಾಗೆಯೇ ಅನುಭವಿಸುತ್ತಿರುತ್ತಾನೆ. ಹೀಗೆ, ಕನಸುಗಳು ಮಲಗಿದಾಗ 'ನಿಜ' ಎನಿಸಿದರೆ ಎಚ್ಚರವಾದಾಗ ನಿಜವೇ? ಎನಿಸುತ್ತದೆ. ಹಾಗಾದರೆ ಕನಸುಗಳ ರಹಸ್ಯವೇನು? ರಾತ್ರಿಯ ಅತಿಥಿಗಳಾದ ಈ ಕನಸುಗಳು ಯಾವಾಗ ಎಲ್ಲಿಂದ ಬರುತ್ತವೆ? ಅವು ಬಂದಾಗ ಏನಾಗುತ್ತದೆ? ಅವುಗಳ ಅರ್ಥ, ಉದ್ದೇಶ ಏನು?

ಈ ಪ್ರಶ್ನೆಗಳಿಗೆ ಉತ್ತರ ತಿಳಿಯುವ ಮೊದಲ ಹೆಜ್ಜೆಯಾಗಿ ನಿದ್ದೆ ಮಾಡುವಾಗ, ಕನಸು ಕಾಣುವಾಗ ನಮ್ಮ ದೇಹದಲ್ಲಿ ಯಾವ ರೀತಿಯ ಬದಲಾವಣೆಗಳು ನಡೆಯುತ್ತವೆ, ಮನಸ್ಸಿನ ಆಳದಲ್ಲಿ ಏನು ನಡೆಯುತ್ತದೆ ಎಂದು ತಿಳಿದುಕೊಳ್ಳೋಣ.

ನಿದ್ರೆಯ ಲೋಕದಿ ಕನಸಿನ ಬೀದಿ......

ನಮ್ಮ ಜೀವನದಲ್ಲಿ ಸುಮಾರು ಮೂರನೇ ಒಂದು ಭಾಗವನ್ನು ನಿದ್ರೆಯಲ್ಲಿ ಕಳೆಯುತ್ತೇವೆ. ಅದರಲ್ಲಿ ಸುಮಾರು ನಾಲ್ಕನೇ ಒಂದು ಭಾಗ, ಎಂದರೆ ಪ್ರತಿ ರಾತ್ರಿಯೂ ಎರಡು ಗಂಟೆ ಹೊತ್ತು ಕನಸು ಕಾಣುವುದರಲ್ಲಿ ಕಳೆಯುತ್ತದೆ. ತಾವು ರಾತ್ರಿ ಕಂಡ ಕನಸುಗಳು ಹಗಲಾದಾಗ ಎಲ್ಲರಿಗೂ ನೆನಪಿರುವುದಿಲ್ಲ. ಆದರೂ ಪ್ರತಿಯೊಬ್ಬರೂ ಕನಸು ಕಾಣುತ್ತಾರೆ. ಕನಸು, ರಾತ್ರಿಯಲ್ಲಿ ಸಿಗುವ ಅಡೆತಡೆಗಳಿಲ್ಲದ ನಿದ್ರೆಯಲ್ಲಿ, ಇರಲೇಬೇಕಾದ ಭಾಗ.

ನಿದ್ರೆಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು: ಮೊದಲನೆಯದು ಹಗುರವಾದ ನಿದ್ರೆ. ಎರಡನೆಯದು ಗಾಢ ನಿದ್ರೆ. ಕನಸು ಬೀಳುವುದು ಹಗುರ ನಿದ್ರೆಯ ಅವಧಿಯಲ್ಲಿ ಮಾತ್ರ. ಮಲಗಿದ ಕೂಡಲೇ ಹಗುರನಿದ್ರೆ ಮೊದಲಾಗುತ್ತದೆ. ಕ್ರಮೇಣ, ನಾವು ಆಳವಾದ ನಿದ್ರೆಯಲ್ಲಿ ಮುಳುಗುತ್ತೇವೆ. ಪ್ರತಿರಾತ್ರಿಯೂ ನಾವು ಹಗುರನಿದ್ರೆ ಹಾಗೂ ಆಳನಿದ್ರೆಗಳ ಸುಮಾರು ಐದು ಚಕ್ರಗಳನ್ನು ಅನುಭವಿಸುತ್ತೇವೆ. ರಾತ್ರಿ ಕಳೆದಂತೆ ಹಗುರ ನಿದ್ರೆಯ ಅವಧಿ ಹೆಚ್ಚುತ್ತದೆ.

ಈಗಾಗಲೇ ಹೇಳಿದಂತೆ, ನಾವು ಕನಸುಕಾಣುವುದು ಹಗುರ ನಿದ್ರೆ ಮಾಡುವಾಗ. ಈ ಅವಧಿಯಲ್ಲಿ ಕಣ್ಣಗುಡ್ಡೆಗಳು ಮುಚ್ಚಿದ ರೆಪ್ಪೆಗಳ ಕೆಳಗೆ ವೇಗವಾಗಿ ಆಕಡೆ, ಈಕಡೆ ಚಲಿಸುತ್ತಿರುತ್ತವೆ. ಕನಸಿನಲ್ಲಿ, ಚಲಿಸುವ ದೃಶ್ಯವನ್ನು ಹಿಂಬಾಲಿಸುತ್ತಿರುವ ಹಾಗೆ. ಒಂದು ಪಕ್ಷ ನಿದ್ರೆಯ ಈ ಸ್ಥಿತಿಯಲ್ಲಿ ಮಲಗಿದವನನ್ನು ಎಬ್ಬಿಸಿ ಕೇಳಿದರೆ, ಅವನು ತಾನು ''ಕನಸು ಕಾಣುತ್ತಿದ್ದೆನೆಂದು'' ಹೇಳಬಹುದು. ಆಗ ಬೇರೆ ಕೆಲವು ಶಾರೀರಿಕ ಬದಲಾವಣೆಗಳು ನಡೆಯುತ್ತವೆ. ಕುತ್ತಿಗೆಯ ಮಾಂಸಖಂಡಗಳ ಬಿಗಿತ, ಅಂಗಭಂಗಿಗಳ ಬದಲಾವಣೆ, ಬೆವರುವಿಕೆ ಮತ್ತು ಹೃದಯದ ಬಡಿತದ ಹೆಚ್ಚಳ ಏರುಪೇರಾದ ನಾಡಿಮಿಡಿತ - ಈ ಬದಲಾವಣೆಗಳಲ್ಲಿ ಕೆಲವು. ರಾತ್ರಿ



ವ್ಯಕ್ತಿಯೊಬ್ಬನಿಗೆ ಕನಸಿನಲ್ಲಿ ಕಾಣುವ ಹಸು ತಾಯಿಗೆ ಸಂಕೇತವಾಗಿರಬಹುದು

ಕಳೆದು ಹಗಲಿನ ಕಡೆಗೆ ಚಲಿಸಿದಂತೆ ಕನಸುಗಳು ಹೆಚ್ಚು ಉದ್ದವಾಗುತ್ತವೆ. ಅವುಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ.

ಮನುಷ್ಯನ ಮನಸ್ಸಿನ ಆರೋಗ್ಯಕ್ಕೂ, ಕನಸು ಕಾಣುವುದಕ್ಕೂ ಸಂಬಂಧವಿದೆ. ಈ ನಂಟನ್ನು ತಿಳಿಯಲು ಈಚೆಗೆ ಕೆಲವು ಪ್ರಯೋಗಗಳನ್ನು ನಡೆಸಲಾಗಿದೆ. ಇನ್ನೇನು, ಈ ಮನುಷ್ಯ ಕನಸುಕಾಣಲು ಮೊದಲು ಮಾಡಬೇಕು ಎನ್ನುವಾಗ, ಅವನ ನಿದ್ದೆಯನ್ನು ಕೆಡಿಸಲಾಗುತ್ತಿತ್ತು. ಈ ರೀತಿ ಒಂದೇ ಸಮನೆ ಐದು ದಿನಗಳು ಮಾಡಿದಾಗ, ಪ್ರಯೋಗಕ್ಕೆ ಒಳಗಾದವರು ಸಿಡುಕುತ್ತಿದ್ದರು, ದಣಿದಂತೆ ಕಾಣುತ್ತಿದ್ದರು. ಅವರಿಗೆ ಮತ್ತೆ ಮಾಮೂಲಿನಂತೆ ಮಲಗುವ ಅವಕಾಶ ಕೊಟ್ಟಾಗ ಹೆಚ್ಚುಕಾಲ ಕನಸು ಕಾಣುವುದರ ಮೂಲಕ ತಮಗೆ ಆಗಿದ್ದ ಕನಸಿನ ನಷ್ಟವನ್ನು ತುಂಬಿಕೊಳ್ಳುತ್ತಿದ್ದರು.

ಈಚೆಗೆ ಕನಸುಗಳನ್ನು ಕುರಿತು ಕೆಲಸಮಾಡುತ್ತಿರುವ ವಿಜ್ಞಾನಿಗಳು ಕಣ್ಣಿನ ಚಲನವಲನಗಳನ್ನು ಪತ್ತೆ ಮಾಡಲು, ಹಾಗೂ ಮೆದುಳಿನಲ್ಲಿ ಉಂಟಾಗುವ ವಿದ್ಯುತ್ ಅಲೆಗಳ ನಮೂನೆಯನ್ನು ಗುರುತಿಸಲು ಯಂತ್ರಗಳನ್ನು ಕಂಡುಹಿಡಿದಿದ್ದಾರೆ. ಅವುಗಳ ಸಹಾಯದಿಂದ ಒಬ್ಬ ವ್ಯಕ್ತಿ ಯಾವಾಗ ಕನಸು ಕಾಣುತ್ತಿದ್ದಾನೆ, ಯಾವಾಗ ಇಲ್ಲ ಎಂದು ಹೇಳಬಹುದು.

ಕನಸುಗಳಲ್ಲಿ 'ಕಾಲವು ಮೊಟಕಾಗುತ್ತದೆ'. ಎಂದರೆ, ಎಷ್ಟೋ ನಿಮಿಷಗಳ ಕಾಲ ನಡೆದಂತೆ ನಮಗೆ ತೋರುವ ಘಟನೆಗಳು ತುಂಬಿರುವ ಕನಸುಗಳನ್ನು ನಾವು ಕೇವಲ ಕೆಲವೇ ಸೆಕೆಂಡುಗಳಲ್ಲಿ ಕಾಣುತ್ತೇವೆ ಅಥವಾ ಕಂಡಿರುತ್ತೇವೆ. ಅಂದರೆ, ಕನಸಿಗೂ ಮನೋವೇಗ ಇರುತ್ತದೆ.

ನಮ್ಮ ಕನಸುಗಳಲ್ಲಿ ಮನಸ್ಸು ಯಾವ ಪಾತ್ರವಹಿಸುತ್ತದೆ ಎನ್ನುವುದನ್ನು ಇನ್ನು ಮುಂದೆ ನೋಡೋಣ.

ಇದು ವಿವರವಾಗಿ ಹೇಳಬೇಕಾದ ಕಥೆ. ಈ ಕಥೆಯಲ್ಲಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕೋಣ. ಕನಸುಗಳಿಗೆ ಏನು ಕಾರಣ? ಕನಸಿನಲ್ಲಿ ಏನಾಗುತ್ತದೆ? ಮನಸ್ಸು ಕನಸುಗಳನ್ನು ಹೇಗೆ ಕಟ್ಟುತ್ತದೆ? ಕನಸು ನಮಗೆ ಏನು ಹೇಳಲು ಪ್ರಯತ್ನಿಸುತ್ತದೆ? ಈ ಪ್ರಶ್ನೆಗಳಿಗೆ ಉತ್ತರ ಹೇಳುವುದು ಸುಲಭವಲ್ಲ. ಆದರೂ ಸರಳವಾಗಿ ಅವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

ಕನಸುಗಳಿಗೆ ಬೇರೆ ಬೇರೆ ಕಾರಣಗಳಿವೆ. ದೇಹದ ಆರೋಗ್ಯವನ್ನು ಅವಲಂಬಿಸಿದ ಕೆಲವು ಸಂಗತಿಗಳು ಕನಸು ಬೀಳುವುದನ್ನು ತೀರ್ಮಾನಿಸುತ್ತವೆ. ಬೇರೆ ಬೇರೆ ರೋಗಗಳಿಂದ ನರಳುವವನಿಗೆ ಬೀಳುವ ಕನಸುಗಳಿಗೂ ಆರೋಗ್ಯವಂತನಿಗೆ ಬೀಳುವ ಕನಸುಗಳಿಗೂ ವ್ಯತ್ಯಾಸ ಇರುತ್ತದೆ. ಹಾಗೆಯೇ ಹಸಿವು, ಬಾಯಾರಿಕೆ, ಅಜೀರ್ಣ, ಮಲಮೂತ್ರದ ಒತ್ತಡಗಳೂ ಕೂಡಾ ಕನಸಿಗೆ ಕಾರಣವಾಗುತ್ತವೆ. ಅದೇ ರೀತಿ, ಮನುಷ್ಯನು ಮಲಗಿರುವಾಗ ಅನುಭವಿಸುವ ವಾಸನೆ, ಶಬ್ದ, ಸ್ಪರ್ಶ, ಹವಾಮಾನದ ಬದಲಾವಣೆ ಮುಂತಾದ ಸಂಗತಿಗಳೂ ಕನಸಿಗೆ ಕಾರಣವಾಗುತ್ತವೆ. ಆದರೆ, ಮೇಲೆ ಹೇಳಿದ ಕಾರಣಗಳಿಂದ ಒಟ್ಟು ಕನಸುಗಳ ಮುಕ್ಕಾಲು ಪಾಲು ಭಾಗವನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಬಹುಪಾಲು ಕನಸುಗಳಿಗೆ ಮಾನಸಿಕವಾದ ಕಾರಣಗಳಿರುತ್ತವೆ. ಮೊಟ್ಟಮೊದಲನೆಯದಾಗಿ ಕನಸಿನ ದೃಶ್ಯಗಳು ಮನಸ್ಸಿನ 'ಅನಿಸಿಕೆಗಳು'. ಉದಾಹರಣೆಗೆ ಕಥೆಕಟ್ಟುವವನು ಅದರಲ್ಲಿ ತನ್ನ ಭಾವನೆಗಳನ್ನು ಸೇರಿಸುತ್ತಾನೆ. ಚಿತ್ರ ಬರೆಯುವವನು ಕೂಡಾ ಹಾಗೆಯೇ. ಕನಸಿನಲ್ಲಿ ಇದೇ ರೀತಿ ಆಗುತ್ತದೆ. ಆದರೆ ನಮ್ಮ ಅನಿಸಿಕೆಗಳು ಬಹಳಷ್ಟು ಸಾರಿ ನಮ್ಮ ಮಟ್ಟಿಗೆ ನಿಜವಾಗಿರುತ್ತವೆ. ಇವು ನಮ್ಮ ಮನಸ್ಸಿನ ಸ್ಥಿತಿಯ ಮೇಲೆ ನಿಂತಿರುತ್ತವೆ. ಮನಸ್ಸು ನಿದ್ದೆಯಲ್ಲೂ ಕೆಲಸ ಮಾಡುತ್ತಿರುತ್ತದೆ. ಯೋಚನಾಶಕ್ತಿಯು ನಿದ್ದೆ, ಎಚ್ಚರಗಳೆರಡಕ್ಕೂ ಸಮಾನ. ಯೋಚನೆ ಮಾಡುವಾಗ

ಅನೇಕ ವಿಚಾರಗಳು ರೂಪತಾಳುತ್ತವೆ. ಈ ವಿಚಾರಗಳು ಸರಿಯಾಗಿರದಿದ್ದರೂ ಮನಸ್ಸು 'ಅವೇ ಸರಿ' ಎಂದು ತಿಳಿಯುತ್ತೇವೆ.

ಹೀಗೆ ಮನಸ್ಸು ಒಂದೇ ಸಮನೆ ವಿಚಾರಗಳನ್ನು ಕಟ್ಟುತ್ತಾ ಹೋಗುತ್ತದೆ. ಎಚ್ಚರವಾಗಿರುವಾಗ ಮನುಷ್ಯನು ಈ ರೀತಿಯ ವಿಚಾರಗಳನ್ನು ಮಾತಿನ ಮೂಲಕ ಬೇರೆಯವರೊಂದಿಗೆ ಹಂಚಿಕೊಳ್ಳುತ್ತಾನೆ. ಆದರೆ ನಿದ್ದೆಮಾಡುತ್ತಿರುವಾಗ, ಕನಸುಗಳು ಅದೇರೀತಿ ಭಾವನೆಗಳನ್ನು ಹೊರಗೆ ಇಡುವ ಸಾಧನಗಳಾಗುತ್ತವೆ. ಕನಸಿನಲ್ಲಿಯೂ ಭಾಷೆಯಲ್ಲಿರುವಂತೆ ಒಬ್ಬ ವ್ಯಕ್ತಿಯ ವಿಚಾರಗಳು ಅಡಗಿರುತ್ತವೆ. ಕನಸಿನ ಭಾಷೆಯಲ್ಲಿ ಚಿತ್ರಗಳಿರುತ್ತವೆ. ನಿಜವಾಗಿ ನೋಡಿದರೆ ವಿಚಾರಗಳು ಕಣ್ಣಿಗೆ ಕಾಣಲಾರವು. ಆದರೆ ಅವು ಕನಸಿನ ಚಿತ್ರಗಳಾಗಿ ರೂಪ ತಳೆದಾಗ ಕಾಣತೊಡಗುತ್ತವೆ. ಚಿಕ್ಕದಾಗಿ, ಚೊಕ್ಕವಾಗಿ ಹೇಳಬೇಕೆಂದರೆ ಕನಸ್ಸಿನಲ್ಲಿನ ಚಿತ್ರಗಳು ನಮ್ಮ ಅನಿಸಿಕೆಗಳ 'ಚಿತ್ರ ರೂಪಗಳು'. ಕೆಲವು ವಿಚಾರಗಳು ಕನಸುಗಳಲ್ಲಿ ಪದೇ ಪದೇ ಕಾಣುತ್ತವೆ. ಮಿಕ್ಕ ಕೆಲವು ಅಪರೂಪ. ಸಾಧಾರಣವಾಗಿ ರಾಜಕೀಯ ಹಾಗೂ ಹಣಕಾಸಿನ ವಿಚಾರಗಳು ಕನಸಿನಲ್ಲಿ ಬರುವುದಿಲ್ಲ. ಬೇರೆಬೇರೆ ಉದ್ಯೋಗ ಮಾಡುವವರು ತಮ್ಮ ಉದ್ಯೋಗದ ಬಗ್ಗೆ ಕನಸು ಕಾಣುವುದಿಲ್ಲ. ಹಾಗಾದರೆ ಮನುಷ್ಯನಿಗೆ ಕನಸು ಕಾಣಲು ಇನ್ನೇನಿದೆ? ಇದೆ. ಅಂತರಂಗಕ್ಕೆ ಸಂಬಂಧಪಟ್ಟ, ಖಾಸಗಿಯಾದ, ಮನಸ್ಸಿನ ಆತಂಕಕ್ಕೆ ಕಾರಣವಾಗುವ ಸಂಗತಿಗಳು ಕನಸಿನ ಸಾಮಗ್ರಿ. 'ಕನಸು ಮನುಷ್ಯನ ಒಳಜೀವನಕ್ಕೆ ಮೀಸಲಾದ ಪುಸ್ತಕ. ಅದು ಮನುಷ್ಯನು ತನಗೆ ತಾನೇ ಬರೆದುಕೊಂಡ ಕಾಗದ. ಅಲ್ಲಿ ನಮ್ಮ ಮನಸ್ಸು ಮಾತನಾಡುತ್ತದೆ.'

ಮೊದಲನೆಯದಾಗಿ ನಾವು ನಿಜವಾಗಿಯೂ ಏನು ತಿಳಿದುಕೊಂಡಿದ್ದೇವೆ ಎಂಬುದನ್ನು ಕನಸುಗಳು ನಮಗೆ ಅರಿವು ಮಾಡಿಕೊಡುತ್ತವೆ. ಈ ತನ್ನತನದ ಅರಿವು ನಮ್ಮ ನಡೆನುಡಿಗಳ ಮೇಲೆ ಪ್ರಭಾವ ಬೀರುತ್ತದೆ. ಈ ಬಗೆಯ ಕನಸುಗಳಲ್ಲಿ ನಮಗೆ ಸಿಗುವ ಲಾಭ ಎಂದರೆ ನಮ್ಮನ್ನೇ ಅರ್ಥಮಾಡಿಕೊಳ್ಳಲು

ಆಗುವ ಸಹಾಯ.

ಎರಡನೆಯದಾಗಿ, ಕನಸುಗಳು ಕನಸು ಕಾಣುವವನು 'ಬೇರೆಯವರ ಬಗ್ಗೆ' ಯಾವ ವಿಚಾರಗಳನ್ನು ಹೊಂದಿದ್ದಾನೆ ಎಂಬುದನ್ನು ತಿಳಿಸುತ್ತವೆ. ತನ್ನ ತಾಯಿ ತಂದೆ, ಅಣ್ಣತಮ್ಮ, ಅಕ್ಕ ತಂಗಿ, ಸ್ನೇಹಿತರು, ಸಂಗಾತಿ, ಮತ್ತು ಮಕ್ಕಳ ಬಗ್ಗೆ ವ್ಯಕ್ತಿಯು ಗುಟ್ಟಾಗಿ ಇಟ್ಟುಕೊಂಡಿರುವ ನಿಜವಾದ ಭಾವನೆಗಳು ಏನೆಂದು ಗೊತ್ತಾಗುತ್ತದೆ. ಎಚ್ಚರದ ಬದುಕಿನಲ್ಲಿ ಮಾಡುವ ಹಾಗೆ ಕನಸಿನಲ್ಲಿ ಮೋಸ ವಂಚನೆಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಇಲ್ಲಿ ಒಂದು ಎಚ್ಚರಿಕೆಯ ಮಾತು ಹೇಳಬೇಕು. ಬೇರೆ ಜನರ ಬಗ್ಗೆ ನಾವು ತಳೆದಿರುವ ಭಾವನೆಗಳು ನಿಜವಾಗಿ ಇರಬೇಕಿಲ್ಲ. ಇವು ಕನಸಿಗನ ಖಾಸಗೀ ಬದುಕಿನ ವಿಚಾರಗಳು. ಅಂದರೆ, ಬೇರೆ ಜನರು ನಾವು ತಿಳಿದುಕೊಂಡಿದ್ದಕ್ಕಿಂತಾ ಭಿನ್ನವಾಗಿಯೇ ಇರಬಹುದು. ಮಂಗಳೆಯ ಕನಸಿನಲ್ಲಿ ಅವಳ ಅಣ್ಣ ರಾಕ್ಷಸನಂತೆ ಕಾಣುವುದು ನಿಜ. ಆದರೆ, ನಿಜವಾಗಿಯೂ ಅವನು ರಾಕ್ಷಸನಂತೆ ಕೆಟ್ಟವನಲ್ಲದೆ ಇರಬಹುದು. ಕೆಲವು ದಿನಗಳ ನಂತರ ಇದೇ ಅಣ್ಣ ಮಂಗಳೆಯ ಕನಸಿನಲ್ಲಿ ರಾಜಕುಮಾರನಾಗಿ ಕಾಣಿಸಿಕೊಳ್ಳಬಹುದು.

ಮೂರನೆಯದಾಗಿ, ಕನಸುಗಳು ಕನಸು ಕಾಣುವವನಿಗೆ 'ಜಗತ್ತಿನ ಬಗ್ಗೆ' ಯಾವ ಭಾವನೆ ಇದೆ ಎಂದು ಹೇಳುತ್ತವೆ. ಇಲ್ಲಿ ಜಗತ್ತು ಎಂದರೆ ಅವನ ಸುತ್ತಲಿನ ಪರಿಸರ ಮತ್ತು ಅದರ ಎಲ್ಲಾ ಭಾಗಗಳು. ನಾವು ಎಚ್ಚರದ ಬದುಕಿನಲ್ಲಿ ಅನೇಕ ಬಯಕೆಗಳಿಗೆ ಕಡಿವಾಣ ಹಾಕಿರುತ್ತೇವೆ. ಆದರೆ, ಕನಸುಗಳಲ್ಲಿ ಈ ಬಯಕೆಗಳು ಅಡೆತಡೆ ಇಲ್ಲದೆ ಬಯಲಿಗೆ ಬರುತ್ತವೆ. ಸಮಾಜವು ತಪ್ಪೆಂದು ಹೇಳುವ ಹೆಣ್ಣು - ಗಂಡಿನ ಸಂಬಂಧ ಮತ್ತು ಹಿಂಸೆಯನ್ನು ಕುರಿತ ಬಯಕೆಗಳಿಗೆ ಈ ಕನಸುಗಳಲ್ಲಿ ಸಿಂಹಪಾಲು. ಇಂತಹ ಬಯಕೆಗಳನ್ನು ಕುರಿತು ನಾವು ಪಡುವ ಆತಂಕ ಮತ್ತು ನಡೆಸುವ ಹೋರಾಟಗಳು, ಕನಸಿನದೇ ಆದ ಹೊಸ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತವೆ.

ಬಹು ಮುಖ್ಯವಾಗಿ ಇನ್ನೊಂದು ಸಂಗತಿ, ಕನಸುಗಳ ಮೂಲಕ ನಮಗೆ ತಿಳಿಯುತ್ತದೆ. ಅದು ಕನಸು ಕಾಣುವವನ ಆ ಕ್ಷಣದ ಸಮಸ್ಯೆಗಳು ಮತ್ತು ತೊಳಲಾಟಗಳು. ಮುಚ್ಚಿಟ್ಟ ಬಯಕೆಗಳ ಹಾಗೆ ಬಚ್ಚಿಟ್ಟ ಭಯಗಳಿಗೂ ಕನಸಿನಲ್ಲಿ ಜಾಗ ಇದೆ. ಉದಾಹರಣೆಗೆ ಏಣಿಯನ್ನು ಹತ್ತಲು ಹೋಗಿ ಕೊನೆಯ ಹಂತದಲ್ಲಿ ಮತ್ತೆಮತ್ತೆ ಕೆಳಗೆ ಬೀಳುವ ಕನಸು ಕಾಣಬಹುದು. ಇವು ಉದ್ಯೋಗ ಜೀವನದ ಯಶಸ್ಸಿನ ಬಗ್ಗೆ ನಮಗೆ ಇರುವ ಭಯಗಳನ್ನು ಹೇಳುತ್ತವೆ. ಹಾಗೆಯೇ ಹತ್ತುತ್ತಾ ಹತ್ತುತ್ತಾ ಆಕಾಶ ಸೇರುವ ಕನಸು. ಸಾವಿನ ಕಲ್ಪನೆಯನ್ನು ತಿಳಿಸಬಹುದು. ರೆಕ್ಕೆ ಬಿಚ್ಚಿ ಹಾರುವ ಕನಸು ಉತ್ಸಾಹ ಉಲ್ಲಾಸಗಳ ಸೂಚನೆಯಾಗಿರಬಹುದು. ಪ್ರತಿಯೊಬ್ಬರಿಗೂ ಸಮಸ್ಯೆಗಳಿರುತ್ತವೆ. ಪ್ರತಿಯೊಬ್ಬರೂ ಪರಿಹಾರದ ದಾರಿ ಹುಡುಕುತ್ತಿರುತ್ತೇವೆ. ನಿಜ ಹೇಳಬೇಕೆಂದರೆ ನಮ್ಮ ಸಮಸ್ಯೆಗಳ ರೂಪ ನಮಗೆ ಗೊತ್ತಿರುವುದಿಲ್ಲ. ಈ ಕಾರಣದಿಂದ ನಮಗೆ ಪರಿಹಾರಗಳು ಸಿಗುವುದೂ ಸುಲಭವಲ್ಲ. ಕನಸುಗಳು ನಮ್ಮನ್ನು ನಿಜವಾದ ಸಮಸ್ಯೆಗಳ ಮುಂದೆ ನೇರವಾಗಿ ನಿಲ್ಲಿಸುತ್ತವೆ. ಸಮಸ್ಯೆಗಳ ಬಲೆಯಲ್ಲಿ ಸಿಕ್ಕಿಕೊಂಡ ಮನುಷ್ಯನು ಅವುಗಳಿಂದ ಬಿಡುಗಡೆ ಹೊಂದಲು ನಡೆಸುವ ಹೋರಾಟದ ದಾಖಲಾತಿ ಪುಸ್ತಕವೇ 'ಕನಸು'.

ಒಟ್ಟಿನಲ್ಲಿ 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವ ಹಾಗೆ ಕನಸುಗಳಲ್ಲಿ ಬಾರದೆ ಇರುವ ವಿಚಾರವೇ ಇಲ್ಲ. ನೆನ್ನೆ ಮೊನ್ನೆ ಪಡೆದ ಅನುಭವಗಳೂ ಕನಸಿನಲ್ಲಿ ಬರುತ್ತವೆ. ಹಾಗೆಯೇ ಎಷ್ಟೋ ವರ್ಷಗಳ ಹಿಂದಿನ ಸಂಗತಿಗಳೂ ಬರುತ್ತವೆ. ಆದರೆ ಅವು ಚಾಚೂತಪ್ಪದೆ ಮೊದಲಿನ ಹಾಗೇ ಬರುವುದಿಲ್ಲ. ಚಿಕ್ಕ ಪುಟ್ಟ ವ್ಯತ್ಯಾಸ ಇರುತ್ತದೆ. ಕನಸುಗಳಲ್ಲಿ ನಮ್ಮ ಆಸೆಗಳು ಈಡೇರುವುದನ್ನು ನೋಡುತ್ತೇವೆ. ಹಾಗೆಯೇ ಆಸೆಗಳು ಪುಡಿಪುಡಿಯಾಗುವುದನ್ನೂ ನೋಡುತ್ತೇವೆ. ನಮಗೆ ಆಗದವರ ಬಗ್ಗೆ ಸಿಟ್ಟು, ಅಸೂಯೆ ತುಂಬಿರುವ ಕನಸು ಕಾಣುತ್ತೇವೆ. ನಾವು ಪ್ರೀತಿಸುವವರಿಗೆ ಒಳ್ಳೆಯದಾಗುವುದನ್ನು ನೋಡುತ್ತೇವೆ. ಕೆಲವು ಸಲ ನಮ್ಮ ಆತಂಕವು ನಮ್ಮ ಪ್ರೀತಿಪಾತ್ರರಿಗೆ ಅಪಾಯ ಸಂಭವಿಸುವುದನ್ನು ಕನಸಿನಲ್ಲಿ ತೋರಿಸಬಹುದು. ನಮ್ಮ ಕನಸುಗಳು ಮುಂದಿನ ಜೀವನದಲ್ಲಿ ನಾವು ಏನು



ನಿದ್ದೆ ಮಾಡುತ್ತಿರುವಾಗ ಕೇಳಿಸುವ ಅಲಾರಾಂ ಸದ್ದು ದೇವಸ್ಥಾನದಲ್ಲಿ ಗಂಟೆ ಬಾರಿಸಿದಾಗ ಕೇಳುವ ಸದ್ದಿನಂತಿರಬಹುದು

ಮಾಡಬೇಕೆಂದು ಸೂಚಿಸಬಹುದು. ಭವಿಷ್ಯದ ಯೋಜನೆಗಳ ಬಗ್ಗೆ ಮಾತನಾಡಬಹುದು. ಆದರೆ ಕನಸುಗಳು ಕೊಡುವ ಈ ಸಂದೇಶಗಳನ್ನು ತಿಳಿದುಕೊಳ್ಳುವ ಬಗೆ ಹೇಗೆ? ಒಂದು ಕನಸನ್ನು ಒಡೆದು ನೋಡುವುದರಿಂದ ಇದು ಸಾಧ್ಯ.

ಒಂದು ಕನಸನ್ನು ಒಡೆದು ನೋಡೋಣ

ಕನಸನ್ನು ಒಡೆದು ನೋಡುವುದೆಂದರೆ 'ಕನಸಿನ ಅರ್ಥ ತಿಳಿಯುವುದು'. ಕನಸಿನ ಅರ್ಥ ಕನಸಿನಲ್ಲಿಯೇ ಇರುತ್ತದೆ. ಅದಕ್ಕಾಗಿ ಯಾವುದೇ ಪುಸ್ತಕವನ್ನು ಓದಬೇಕಾಗಿಲ್ಲ. ಅದರ ಬದಲಾಗಿ ಕನಸನ್ನೇ ಓದಬೇಕು. ಹೀಗೆ ಓದಲು ನಾವು ಕನಸಿನಲ್ಲಿ ಬರುವ ಚಿತ್ರಗಳನ್ನು ವಿಚಾರಗಳನ್ನಾಗಿ ಬದಲಾಯಿಸಿಕೊಳ್ಳಬೇಕು. ಹೀಗೆ ಓದುವುದರಿಂದ ನಮಗೆ ಆ ಮನುಷ್ಯನ ವ್ಯಕ್ತಿತ್ವದ ಬಗ್ಗೆ ಕೆಲವು ವಿಚಾರಗಳು ಗೊತ್ತಾಗುತ್ತವೆ. ಆದರೆ ಅವನ ಮನಸ್ಸಿನ ಒಟ್ಟಾದ ಮತ್ತು ಸರಿಯಾದ ಚಿತ್ರ ಸಿಗುವುದು ಅವನಿಗೆ ಬೀಳುವ ಅನೇಕ ಕನಸುಗಳನ್ನು ಒಟ್ಟಿಗೆ ಪರೀಕ್ಷೆ ಮಾಡಿದಾಗ. ಹೀಗೆ ಮಾಡಿದಾಗ, ಒಂದು ಕನಸು ಇನ್ನೊಂದರ ಮೇಲೆ ಬೆಳಕು ಚೆಲ್ಲುತ್ತದೆ. ಎಲ್ಲ ಕನಸುಗಳೂ ಸೇರಿ ಮನಸ್ಸಿನ ಒಳಮನೆಯನ್ನು ತೋರಿಸುತ್ತವೆ.

ಕನಸುಗಳ ಸರಿಯಾದ ಅರ್ಥ ಗೊತ್ತು ಮಾಡಿಕೊಳ್ಳಲು ನಮಗೆ ಕನಸು ಕಾಣುವವನ ಜೀವನದ ಬಗ್ಗೆ ತಿಳಿದಿರಬೇಕು. ಎಷ್ಟೋ ಬಾರಿ ಕನಸು ಕಂಡಾತನೆ ತನ್ನ 'ಕನಸಿಗೆ' ಸರಿಯಾದ ಅರ್ಥ ಹೇಳಬಹುದು. ಏಕೆಂದರೆ ಕನಸೆಂಬ ನಾಟಕದ ಲೇಖಕ, ನಿರ್ದೇಶಕ ಹಾಗೂ ನಟ ಎಲ್ಲವೂ ಅವನೇ. ಅವನ ಬದುಕಿನ ವಿಚಾರಗಳ ಮೇಲೆಯೇ ಎಲ್ಲವನ್ನೂ ಕಟ್ಟಲಾಗಿರುತ್ತದೆ. ಆತನೊಂದಿಗೇ ಆತನ ಕನಸನ್ನೂ ಚರ್ಚಿಸುವುದರಿಂದ ಕನಸಿನ ಸರಿಯಾದ ರೂಪ ಗೊತ್ತಾಗುತ್ತದೆ. ಇನ್ನೊಂದು ಸಂಗತಿಯೆಂದರೆ ಕೆಲವು ಕನಸುಗಳು ಒಗಟುಗಳಂತೆ ಕಾಣುತ್ತವೆ. ಏಕೆಂದರೆ ಅವು 'ಸಂಕೇತ'ಗಳಿಂದ ತುಂಬಿರುತ್ತವೆ. ಸಂಕೇತಗಳೆಂದರೆ ಮನಸ್ಸಿನ ಭಾವನೆಗಳನ್ನು

ಸೂಚಿಸುವ ಚಿತ್ರ ರೂಪದ ಗುರುತುಗಳು. ಅವುಗಳ ಉದ್ದೇಶ ಆಲೋಚನೆಗಳನ್ನು ಮುಚ್ಚಿಡುವುದು.

ಉದಾಹರಣೆಗೆ ಒಬ್ಬ ಮನುಷ್ಯನ ಕನಸಿನಲ್ಲಿ ಅವನ ತಂದೆಯು 'ರಾಜನಾಗಿ' ಕಂಡರೆ, ಅವನು ತನ್ನ ತಂದೆಯಲ್ಲಿ ರಾಜಠೀವಿಯನ್ನು ಗುರುತಿಸಿದ್ದಾನೆ ಎಂದು ಅರ್ಥ. ಹಾಗೆಯೇ ಕನಸಿನಲ್ಲಿ ಕಾಣುವ ಹಸು, ತಾಯಿಗೆ ಅದರಲ್ಲೂ ಅವಳ ಪೋಷಣೆಯ ಗುಣಕ್ಕೆ ಸಂಕೇತವಾಗುತ್ತದೆ. ಬಹುಪಾಲು ಈ ಸಂಕೇತಗಳು ಖಾಸಗಿಯಾದವು. ಅವು ಕನಸು ಕಾಣುವವನ ಮನಸ್ಸಿನಲ್ಲಿ ಹುಟ್ಟಿದಂಥವು. ಆದ್ದರಿಂದ ಎಲ್ಲರಿಗೂ ಹೊಂದುವಂತಹ 'ಸಂಕೇತಗಳ ಪಟ್ಟಿ' ಇರುವುದಿಲ್ಲ. ಸಂದರ್ಭ ಹಾಗೂ ವ್ಯಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು 'ಸಂಕೇತ'ಗಳನ್ನು ಬಿಡಿಸಿ ನೋಡಬೇಕು. ಈ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮೊದಲು ಒಂದು ಕನಸನ್ನು ಒಡೆದು ಆ ಮೂಲಕ ಕೆಲವು ಸಂಗತಿಗಳನ್ನು ನೋಡೋಣ. ನಂತರ ಒಬ್ಬನೇ ವ್ಯಕ್ತಿಗೆ ಬಿದ್ದ ಮೂರು ಕನಸುಗಳನ್ನು ಒಟ್ಟಾಗಿ ನೋಡಿ ಅದರಲ್ಲಿ ಕಾಣುವ ವಿಶೇಷವನ್ನು ತಿಳಿಯೋಣ.

ಕನಸು-೧

ನಾನು ಯಾವುದೋ ಊರಿಗೆ ಹೋಗಬೇಕಾಗಿತ್ತು. ತುಂಬಾ ಗಡಿಬಿಡಿಯಲ್ಲಿದ್ದೇನೆ. ತಡವಾಗುತ್ತಿದೆ. ಎಷ್ಟು ಹುಡುಕಿದರೂ ನನ್ನ ಚೀಲ ಸಿಗುತ್ತಿಲ್ಲ. ಸಮಯ ಓಡುತ್ತಿದೆ. ರೈಲು ಹೊರಡುವ ಸಮಯ ಹತ್ತಿರ ಬಂತು. ಕೊನೆಗೂ ನನ್ನ ಸಾಮಾನುಗಳನ್ನು ಜೋಡಿಸಿಕೊಂಡು ರೈಲು ನಿಲ್ದಾಣದ ಕಡೆಗೆ ಓಡುತ್ತಿದ್ದೇನೆ. ಆಗ, ಮುಖ್ಯವಾದ ಪತ್ರ ಇರುವ ಇನ್ನೊಂದು ಚೀಲವನ್ನು ಮರೆತು ಹೋಗಿದ್ದೇನೆ ಎಂದು ನೆನಪಾಯಿತು. ಉಸಿರು ಕಟ್ಟಿಕೊಂಡು ಮತ್ತೆ ಹಿಂದೆ ಹೋಗಿ ಚೀಲ ತೆಗೆದುಕೊಂಡು ಮರಳಿ ಸ್ಟೇಷನ್ ಕಡೆ ಓಡುತ್ತಿದ್ದೇನೆ. ಆದರೆ ಮುಂದೆ ಚಲಿಸಲು ಸಾಧ್ಯವಾಗುತ್ತಿಲ್ಲ. ಕಡೆಗೆ ನನ್ನನ್ನು ನಾನೇ ತಳ್ಳಿಕೊಂಡು ರೈಲು ಬಂಡಿಯ ಹತ್ತಿರ ಹೋದೆ. ಆದರೆ ರೈಲು ಹೊರಟಾಗಿತ್ತು.

ಆ ಅತಿ ಉದ್ದವಾದ ರೈಲು ವಿಚಿತ್ರ ಅಂಕುಡೊಂಕಾದ ತಿರುವಿನಲ್ಲಿ ಹೋಗುತ್ತಿದೆ. ಅದರ ಮುಂದಿನ ಅರ್ಧಭಾಗ ಹಳಿಗಳ ಮೇಲಿದೆ. ಉಳಿದ ಅರ್ಧಭಾಗ ತಿರುವಿನಲ್ಲಿದೆ. ಚಾಲಕ ಉದಾಸೀನದಿಂದ ವೇಗವಾಗಿ ಓಡಿಸುತ್ತಿದ್ದಾನೆ. ಇನ್ನೂ ತಿರುವಿನಲ್ಲಿರುವ ಬೋಗಿಗಳು ಹಳಿ ತಪ್ಪುತ್ತವೆ ಅನ್ನಿಸುತ್ತದೆ. ನಾನು ಕೂಗಿಕೊಳ್ಳಲು ಪ್ರಯತ್ನಿಸುತ್ತೇನೆ. ಅಷ್ಟರೊಳಗೆ ಬೋಗಿಗಳು ಹಳಿತಪ್ಪಿ ಪಲ್ಟಿ ಹೊಡೆಯುತ್ತವೆ. ಘೋರವಾದ ಅಪಘಾತ! ನಾನು ಹೆದರಿಕೊಂಡು ಏಳುತ್ತೇನೆ.''

ಈ ಮೇಲಿನ ಕನಸನ್ನು ಕಂಡ ವ್ಯಕ್ತಿ ನಿಜಜೀವನದಲ್ಲಿ ಬಹಳ ಬಡತನದ ಸ್ಥಿತಿಯಿಂದ ಮೇಲಕ್ಕೆ ಬಂದವನು. ತನ್ನ ನಿಷ್ಠೆ, ಶ್ರದ್ಧೆಗಳಿಂದ ಬಹಳ ಮುಂದೆ ಬಂದಿದ್ದನು. ಇನ್ನೂ ಮುಂದೆ ಹೋಗಬೇಕೆಂಬುದು ಆತನ ಆಸೆ. ಹೀಗಿದ್ದಾಗ ಆತ ತಲೆಸುತ್ತುವಿಕೆ, ವಾಕರಿಕೆ, ತಲೆಭಾರ, ಉಸಿರಾಟದ ತೊಂದರೆ ಮುಂತಾದ ತೊಂದರೆಗಳನ್ನು ಅನುಭವಿಸುತ್ತಿದ್ದ. ಅವನು ಚಿಕಿತ್ಸೆಗೆಂದು ಮನೋವೈದ್ಯರ ಬಳಿ ಬಂದಿದ್ದ.

ಈ ಕನಸಿನ ಅರ್ಥ ತಿಳಿಯುವುದು ಕಷ್ಟವಲ್ಲ: ಈ ವ್ಯಕ್ತಿ ಸ್ವಂತ ಶಕ್ತಿಯಿಂದ ಮುಂದೆ ಬಂದಿದ್ದಾನೆ. ಯಾವಾಗಲೂ ಮುಂದೆ ಬರುವ ಆಸೆಯನ್ನು ಹೊಂದಿದ್ದಾನೆ. ಈಗ ಇನ್ನೂ ಉನ್ನತ ಸ್ಥಿತಿಗೆ ಹೋಗುವ ಹಂತ ಬದುಕಿನಲ್ಲಿ ಬಂದಿದೆ. ಇಷ್ಟರವರೆಗೆ ಈ ವ್ಯಕ್ತಿ 'ಕೈಲಾದ' ಮಟ್ಟಿಗೆ ಮುಂದೆ ಬಂದಿದ್ದಾನೆ. ಕಷ್ಟಕರವಾದ ಬದುಕಿನ ದಾರಿಯಲ್ಲಿ ಬಹಳ ಶ್ರಮಿಸಿದ್ದಾನೆ. ಇನ್ನು ಹೆಚ್ಚಿನ ಆಸೆ ಸರಿಯಲ್ಲ. ಇನ್ನೂ ಮುಂದೆ ಹೋಗಲು ಇಷ್ಟಪಟ್ಟರೆ ತೊಂದರೆಯಾಗಬಹುದು ಎಂಬ ಎಚ್ಚರಿಕೆ ಇವೆಲ್ಲವೂ ಈ ಕನಸಿನಲ್ಲಿ ಅಡಕವಾಗಿದೆ. ಅಷ್ಟೇ ಅಲ್ಲದೆ ಆತನ ಕೆಲವು ತೊಂದರೆಗಳು ಅಭದ್ರತೆ ಮತ್ತು ಕಾತರದ ಭಾವನೆಗಳಿಂದ ಉಂಟಾದವುಗಳು. ಈ ಕನಸಿನಲ್ಲಿ ಆತನು ತನ್ನ ಬದುಕನ್ನು ಸೂಚಿಸಲು ಬಳಸಿದ

ಸಂಕೇತ 'ರೈಲು'. ಅವನೇ ರೈಲು ಬಂಡಿಯ ಚಾಲಕ, ತಿರುವುಗಳು ಜೀವನದ ಮುಖ್ಯವಾದ ಹಂತಗಳಿಗೆ ಸಂಕೇತ.

ಇಲ್ಲಿ ಕನಸು ಆ ವ್ಯಕ್ತಿಯ ಪರಿಸ್ಥಿತಿಯನ್ನು ವಿವರವಾಗಿ ತಿಳಿಸಿತ್ತು, ಎಚ್ಚರಿಕೆ ನೀಡಿತ್ತು. ಆದರೆ ಅವನು ಆ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಳ್ಳಲಿಲ್ಲ. ತನ್ನ ಕೆಲಸದಲ್ಲಿ ತುಟ್ಟತುದಿ ತಲುಪಬೇಕೆಂಬ ಹಂಬಲ ಅವನಿಗೆ ತೊಂದರೆ ನೀಡಿತು. ಅವನು ಮನೋರೋಗಿಯಾದ.

ಇನ್ನು ಮುಂದೆ ಒಬ್ಬನೇ ವ್ಯಕ್ತಿ ಕಂಡ ಮೂರು ಕನಸುಗಳನ್ನು ಪರಿಶೀಲಿಸೋಣ. ಈ ಮೂರು ಕನಸುಗಳಲ್ಲಿನ ಸಮಾನ ಅಂಶ ಗುರುತಿಸೋಣ.

ಕನಸು - ೧

"ಒಂದು ದೊಡ್ಡ ಮನೆ. ಅದು ನಮ್ಮದೇ ಮನೆ. ನಾನು, ನಮ್ಮ ತಾಯಿ ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತಿದ್ದೇವೆ. ಅಮ್ಮ ಏನೋ ಹಣ್ಣು ತಿನ್ನಿಸುತ್ತಿದ್ದಾಳೆ. ತಿಂದನಂತರ ಬೀಜವನ್ನು ತೆಗೆದು ದೂರ ಎಲ್ಲೋ ಬಿಸಾಡಿದೆ. ತಕ್ಷಣ ಆ ಕಡೆಯಿಂದ ಹುಲಿ ಬಂತು. ಅಮ್ಮನ ಕಡೆ ತಿರುಗಿದರೆ ಅಲ್ಲಿ ಅವಳು ಇರಲಿಲ್ಲ."

ಕನಸು - ೨

"ನಾನು, ನಮ್ಮ ಅಮ್ಮ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದೇವೆ. ನಾನು ಸ್ನಾನದ ಟವಲ್ಲೊಂದನ್ನು ಮಡಿಸಿ ಪುಟ್ಟದಾಗಿ ಮಾಡಿಕೊಂಡು ರೈಲಿನ ಚಕ್ರದ ಕೆಳಗೆ ಇಡುತ್ತಿದ್ದೇನೆ."

“ನಮ್ಮ ಮನೆ. ಹಾಲಿನಲ್ಲಿ ಮಹಡಿಗೆ ಹತ್ತುವ ಮೆಟ್ಟಿಲುಗಳಿವೆ. ಮೆಟ್ಟಿಲುಗಳು ಅರ್ಧ ಮುಗಿದ ಮೇಲೆ ಸ್ವಲ್ಪ ಜಾಗವಿದೆ. ಒಬ್ಬರು ನಿಲ್ಲುವಷ್ಟು. ಅಲ್ಲಿಂದ ಮುಂದೆ ತಿರುವು ಇದ್ದು ಮೆಟ್ಟಿಲು ಮೇಲಂತಸ್ತಿಗೆ ಕರೆದುಕೊಂಡು ಹೋಗುತ್ತದೆ. ಆ ನಿಲುಗಡೆ ಜಾಗದಲ್ಲಿ ಇಂದಿರಾಗಾಂಧಿ ನಿಂತಿದ್ದಾಳೆ. ಆಕೆ ಬಿಳೀ ಸೀರೆ ಉಟ್ಟಿದ್ದಾಳೆ. ಅದರ ಸೆರಗಿಗೆ ಬೆಂಕಿ ಬಿದ್ದಿದೆ.”

೧. ಈ ಮೇಲಿನ ಕನಸುಗಳಲ್ಲಿ ಎಲ್ಲದರಲ್ಲೂ 'ತಾಯಿ'ಯ ವಿಚಾರ ಬಂದಿದೆ.

೨. ಮೊದಲು ವಿವರಿಸಿದ ಕನಸು ಐದು-ಆರು ಬಾರಿ ಇದೇ ರೀತಿಯಲ್ಲಿ ಬಂದಿದೆ.

೩. ಮೂರೂ ಕನಸುಗಳಲ್ಲಿ ಸಂಕೇತಗಳ ಬಳಕೆ ಆಗಿದೆ.

ಕನಸುಗಳಲ್ಲಿ ಬಂದ ಈ ವಿಚಾರಗಳೊಂದಿಗೆ ಕನಸುಗಾರನ ಜೀವನದ ಸಂದರ್ಭವನ್ನು ಹೋಲಿಸಿ ನೋಡಿದರೆ ಕನಸಿನ ಅರ್ಥ ಸ್ಪಷ್ಟವಾಗಿ ತಿಳಿಯುತ್ತದೆ.

ಕನಸು ಕಂಡಾತನ ಹೆಸರು ರಮೇಶ. ಅವನು ತನ್ನ ತಾಯಿತಂದೆಗಳ ಒಬ್ಬನೇ ಮಗ. ರಮೇಶ ತುಂಬಾ ಶಿಸ್ತಿನಲ್ಲಿ ಬೆಳೆದವನು. ತಾಯಿ ಬಹಳ ದರ್ಪ ಮತ್ತು ಜೋರಿನ ಹೆಂಗಸು. ಮಗ ರಮೇಶ ಸ್ವಾತಂತ್ರ್ಯವೆಂದರೆ ಏನೆಂದು ತಿಳಿಯದೆ ಬೆಳೆದವನು. ತುಂಬಾ ಮಿತಭಾಷಿಯಾದ ರಮೇಶನಿಗೆ ಪ್ರಯಾಣವೆಂದರೆ ಇಷ್ಟ. ಆತನ ಕನಸಿನಲ್ಲಿ ಮತ್ತೆ ಮತ್ತೆ 'ರೈಲು' ಕಾಣಿಸುತ್ತದೆ.

ಈ ಹಿನ್ನೆಲೆಯಲ್ಲಿ ಮೊದಲ ಕನಸಿನ ಅರ್ಥ ಹುಡುಕಿದಾಗ 'ತಾಯಿ'ಗೂ 'ಹುಲಿ'ಗೂ ಒಂದು ಬಗೆಯ ಹೋಲಿಕೆ ತಂದಿರುವುದು ಕಾಣುತ್ತದೆ. ಶಿಸ್ತಿಲ್ಲದೆ

ಎಲ್ಲೆಂದರಲ್ಲಿ ಬೀಜ ಬಿಸಾಡಿದ್ದಕ್ಕಾಗಿ ತಾಯಿ ಕೋಪಗೊಳ್ಳಬಹುದು. ಕೋಪಗೊಂಡ ತಾಯಿಗೆ 'ಹುಲಿ' ಸಂಕೇತ.

ಎರಡನೆಯ ಕನಸಿನಲ್ಲಿ ಪ್ರಯಾಣದ ಚಿತ್ರ ಇದೆ. ವಿಶಾಲವಾದ ಅರ್ಥದಲ್ಲಿ ಪ್ರಯಾಣವೆಂದರೆ ಸಾವು ಕೂಡಾ. ರೈಲಿನ ಚಕ್ರದ ಕೆಳಗಡೆ ಟವಲ್ಲನ್ನು ಇಡುವ ಪ್ರಯತ್ನ ಆಕೆಯಿಂದ ದೂರವಾಗುವ, ಬಿಡುಗಡೆ ಪಡೆಯುವ ಆಸೆಗೆ ಸಂಕೇತವೇ?

ಮೂರನೆಯ ಕನಸಿನಲ್ಲಿ ಇಂದಿರಾಗಾಂಧಿ ದರ್ಪ ಮತ್ತು ಅಧಿಕಾರಗಳೆಂಬ ಗುಣಗಳಿಗೆ ಸಂಕೇತ. ರಮೇಶನ ತಾಯಿಯಲ್ಲೂ ಈ ಗುಣಗಳಿವೆ. ಆದ್ದರಿಂದ ಇಂದಿರಾಗಾಂಧಿ ತಾಯಿಗೆ ಸಂಕೇತವಾಗಿದ್ದಾಳೆ. ಅವಳ ಸೆರಗಿಗೆ ಬೆಂಕಿ ಹತ್ತಿಕೊಳ್ಳುವುದು,ಮತ್ತೆ ತಾಯಿ ಸಾಯಲೆಂಬ ಬಚ್ಚಿಟ್ಟ ಅಪೇಕ್ಷೆಯನ್ನೇ ಸೂಚಿಸುತ್ತದೆ. ಇಲ್ಲಿ ಇನ್ನೊಂದು ಅಂಶವೆಂದರೆ, ಸಾಮಾನ್ಯವಾಗಿ ಕನಸಿನಲ್ಲಿ ಬರುವ ಮಹಡಿ ಮೆಟ್ಟಲುಗಳು, ಭಯ ಅರ್ಥ ಯಾವುದಾದರೂ ತೀವ್ರವಾದ ಭಾವನೆಗೆ ಸಂಕೇತ ವಾಗಿರುತ್ತದೆ. ಆ ದೃಷ್ಟಿಯಿಂದ, ಹುಡುಗ ರಮೇಶ, ಭಯಪಡುವ ಸ್ವಭಾವವನ್ನೂ ತೋರಿಸಿದ್ದಾನೆ.

ಖಂಡಿತವಾಗಿ, ಈ ಕನಸುಗಳು ರಮೇಶನ ಮನಸ್ಸಿನ ಭಯ, ಆತಂಕ ಮತ್ತು ದ್ವೇಷಗಳಿಗೆ ಕನ್ನಡಿ ಹಿಡಿಯುತ್ತವೆ. ಆತನು ತನ್ನ ತಾಯಿಯನ್ನು ಕ್ರೂರಿ ಮತ್ತು ದರ್ಪಿಷ್ಟಳೆಂದು ತಿಳಿದಿದ್ದಾನೆ. ಅವಳ ಸಾವಿನಿಂದ ತನಗೆ ಬಿಡುಗಡೆ ದೊರಕಬಹುದೆಂಬ ನಿರೀಕ್ಷೆ ಕನಸಿನಲ್ಲಿ ಕಾಣುತ್ತದೆ.

ಹೀಗೆ ಮಂಜಿನ ಮರೆಯ ಗುಡ್ಡಗಳಂತೆ, ನಮ್ಮ ಎಚ್ಚರದ ಮನಸ್ಸಿಗೆ

ಮರೆಯಾದ ಸಂಗತಿಗಳು ಕನಸಿನಲ್ಲಿ ಸ್ಪಷ್ಟವಾಗುತ್ತವೆ. ಕನಸು ಕಾಣುವವನ ಮನಃಸ್ಥಿತಿ ಸಮಸ್ಯೆಗಳು ಹಾಗೂ ಪರಿಹಾರ ಕನಸಿನಲ್ಲಿ ತಿಳಿಯುತ್ತದೆ.

ಭಾರತೀಯರ ಕಣ್ಣಲ್ಲಿ 'ಕನಸು'

ಪ್ರತಿಯೊಂದು ದೇಶದಲ್ಲಿಯೂ ಸಾಮಾನ್ಯ ಜನರು ಮತ್ತು ಪಂಡಿತರು ಕನಸುಗಳ ಬಗ್ಗೆ ಯೋಚನೆ ಮಾಡಿದ್ದಾರೆ. ನಮ್ಮ ದೇಶದಲ್ಲಿಯೂ ಕನಸುಗಳ ಅರ್ಥ, ಅವು ಏಕೆ ಬೀಳುತ್ತವೆ, ಮುಂತಾದ ಯೋಚನೆಗಳು ಮೊದಲಿನಿಂದಲೂ ನಡೆದಿವೆ. ಕನಸುಗಳು ಮುಂದೆ ಏನಾಗುತ್ತದೆ ಎಂದು ಹೇಳುತ್ತವೆ ಎಂಬ ನಂಬಿಕೆ ನಮ್ಮಲ್ಲಿ ಹಿಂದಿನಿಂದಲೂ ಇದೆ. ಯಾವ ಕನಸು ಬಿದ್ದರೆ ಮುಂದೆ ಏನು ಕೆಟ್ಟದ್ದು ಅಥವಾ ಏನು ಒಳ್ಳೆಯದು ಆಗುತ್ತದೆ? ಈ ಬಗ್ಗೆ 'ಸ್ವಪ್ನಫಲ' ಎಂಬ ಹೆಸರಿನಲ್ಲಿ ಪುಸ್ತಕಗಳೇ ಬಂದಿವೆ. ಅವು ಮೂಢನಂಬಿಕೆಗಳು ಎನಿಸಿದರೂ, ನಿಜವಾಗಿ ನೋಡಿದರೆ ಸಮಾಜದಲ್ಲಿ ಹರಡಿರುವ ನಂಬಿಕೆಗಳ ಮೂಲಕವೇ ಈ ಕನಸಿನ ಫಲ ಕಟ್ಟಲಾಗಿರುತ್ತದೆ. ಉದಾಹರಣೆಗೆ ಕನಸಿನಲ್ಲಿ 'ಎಮ್ಮೆ'ಯನ್ನು ನೋಡಿದರೆ 'ಸಾವು' ಎನ್ನುತ್ತಾರೆ.

ನಮ್ಮ ಪುರಾಣಗಳ ಪ್ರಕಾರ 'ಎಮ್ಮೆ' ಅಥವಾ 'ಕೋಣ' ಯಮನ ವಾಹನ. ಅರಿಶಿನ, ಕುಂಕುಮ ಕಂಡರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಕೂಡ ಹಾಗೆಯೇ. ನಮ್ಮ ಪುರಾಣಗಳಲ್ಲಿ ಹಾಗೂ ಕಾವ್ಯಗಳಲ್ಲಿ ಬೇರೆ ಬೇರೆಯವರಿಗೆ ಬಿದ್ದ ಕನಸುಗಳ ವಿಚಾರ ಬರುತ್ತದೆ. ದಶರಥನಿಗೆ ಪುತ್ರಕಾಮೇಷ್ಟಿಯಾಗ ಮಾಡಿದರೆ ಮಕ್ಕಳಾಗುವರೆಂಬ ಕನಸು ಬಿತ್ತು. ಅದೇ ರೀತಿ ಹರಿಶ್ಚಂದ್ರನಿಗೆ ಬೇಟೆಯಾಡಿಕೊಂಡು ಬಂದು ವಿಶ್ವಾಮಿತ್ರನ ವನದಲ್ಲಿ ಮಲಗಿದಾಗ ಹೆದರಿಕೆ ಹುಟ್ಟಿಸುವ ಕನಸು ಬೀಳುತ್ತದೆ. ಮೊದಲನೆಯದರಲ್ಲಿ ದಶರಥನ ಮನಸ್ಸಿನಲ್ಲಿ ಇದ್ದ ಆಸೆಗೆ, ಅವನ ತಿಳುವಳಿಕೆ ಕನಸಿನಲ್ಲಿ ಪರಿಹಾರ ಸೂಚಿಸುತ್ತದೆ. ಎರಡನೆಯದರಲ್ಲಿ, ತನ್ನ ಗುರು

ವಸಿಷ್ಠನು ಕೊಟ್ಟ ಎಚ್ಚರಿಕೆಯಿಂದ ಹೆದರಿದ್ದ ಹರಿಶ್ಚಂದ್ರನಿಗೆ, ತನಗೆ ಅಪಾಯವಾಗುವ 'ಕೆಟ್ಟಕನಸು' ಬಂದದ್ದು ಸಹಜ. ಬುದ್ಧ ಮುಂತಾದ ಮಹನೀಯರು ತೇಜೋರೂಪದಲ್ಲಿ ಗರ್ಭದೊಳಗೆ ಹೋದಂತೆ ಅವರ ತಾಯಿಯವರಿಗೆ ಕನಸು ಬಿತ್ತು ಎನ್ನುವುದು ಕೂಡಾ ಅವರ ಆಸೆಗಳಿಗೆ ಸಾಕ್ಷಿ. ಯುರೋಪ್‌ನ ದೇಶಗಳಲ್ಲಿ ಕನಸುಗಳ ಬಗ್ಗೆ ಸಂಶೋಧನೆ ಮಾಡುವುದಕ್ಕೆ ಎಷ್ಟೋ ಮುಂಚೆ ನಮ್ಮ ದೇಶದ ತತ್ವಶಾಸ್ತ್ರಜ್ಞರು ಅವುಗಳ ಬಗ್ಗೆ ಯೋಚಿಸಿದ್ದರು. ಕಣಾದ, ಉದಯನ, ಶ್ರೀಧರ, ಚರಕ ಮುಂತಾದವರು ಇವರಲ್ಲಿ ಮುಖ್ಯರು. ಅವರು ಬೇರೆ ಬೇರೆಯಾಗಿ ಯೋಚನೆ ಮಾಡುವ ಗುಂಪುಗಳಿಗೆ ಸೇರಿದವರು.

ಮೊದಲನೆಯ ಗುಂಪಿನ ಪ್ರಕಾರ ಕನಸುಗಳು "ಅವನ್ನು ಕಾಣುತ್ತಿರುವವನು ಈಗಾಗಲೇ ಪಡೆದ ಅನುಭವಗಳ ಮರುಕಾಣುವಿಕೆ ಅಲ್ಲ. ಬದಲಾಗಿ ಹೊರಗಿನ ಇಂದ್ರಿಯಗಳು ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಒಳಗಿನ ಮನಸ್ಸು ಹೊಸದಾಗಿ ಕಟ್ಟಿದ ನೋಟಗಳ ಹಾಗೂ ಅನುಭವಗಳ ಸರಣಿ. ಹಾಗೆ ಕನಸಿನಲ್ಲಿ ಕಾಣುವ ವಸ್ತುಗಳಿಗೂ, ಅವುಗಳನ್ನು ಕಂಡ ಕಾಲ ಮತ್ತು ಜಾಗಕ್ಕೂ ಸಂಬಂಧವಿಲ್ಲ. ಕನಸಿನ ಗ್ರಹಿಕೆಗಳು ಅಸ್ಪಷ್ಟವೇನೂ ಅಲ್ಲ. ಅವುಗಳನ್ನು ಮನಸ್ಸು ನಿರ್ಮಾಣ ಮಾಡಿದೆಯಾದರೂ, ಎಚ್ಚರವಿದ್ದಾಗ ಪಡೆಯುವ ಅನುಭವಗಳಿಗಿಂತ ಅವು ಬೇರೆ. ಅವುಗಳನ್ನು ಕಾಣುವಾಗ ಮನಸ್ಸು ನಿದ್ದೆಯ ಪ್ರಭಾವಕ್ಕೆ ಗುರಿಯಾಗಿರುತ್ತದೆ. ಆದ್ದರಿಂದಲೇ ಅವುಗಳಿಗೂ ಇಂದ್ರಿಯಗಳ ಅನುಭವಗಳಿಗೂ ವ್ಯತ್ಯಾಸ ಇದೆ.

ಎರಡನೆಯ ಗುಂಪಿನ ಪ್ರಕಾರ, ಕನಸುಗಳೆಂದರೆ ಹಳೆಯ ಅನುಭವಗಳನ್ನು ಮತ್ತೆ ಕಾಣುವುದು. ಅವರ ಪ್ರಕಾರ ನಾವು ಕನಸಿನಲ್ಲಿ ಹಳೆಯದನ್ನೇ ನೋಡಿದರೂ ಅವು ಹೊಸದು ಎಂದು ತಪ್ಪಾಗಿ ಗ್ರಹಿಸುತ್ತೇವೆ. ಕುಮಾರಿಲ ಎನ್ನುವವನ ಪ್ರಕಾರ ನಾವು ಹಿಂದೆ ಯಾವಾಗಲೋ ಗ್ರಹಿಸಿದ ಹೊರಗಿನ ವಸ್ತುಗಳು ಒಳಮನಸ್ಸಿನಲ್ಲಿ ಬೇರೆ ರೂಪತಳೆದು ಮತ್ತೆ ಮೇಲೆ ಬಂದಾಗ, ಅವು ಹೊಸದೆಂದೇ ತಿಳಿಯುತ್ತೇವೆ. ಪ್ರಭಾಕರ ಎನ್ನುವವನ ಪ್ರಕಾರ ನಾವು ಹಿಂದೆ ಎಚ್ಚರದ

ಸ್ಥಿತಿಯಲ್ಲಿ ಪಡೆದ ಹಲವು ಅನುಭವಗಳನ್ನು ಮರೆತು ಬಿಟ್ಟಿರುತ್ತೇವೆ. ಹೀಗೆ ಮರೆತುಹೋದ ಅನುಭವಗಳು ಮತ್ತೆ ಕನಸಿನಲ್ಲಿ ಕಾಣಿಸಿಕೊಂಡಾಗ ನಮಗೆ ಅವು ಹೊಸತೆಂಬ ತಪ್ಪು ತಿಳಿವಳಿಕೆ ಉಂಟಾಗುತ್ತದೆ.

ಇಲ್ಲಿ ಎರಡು ಮುಖ್ಯ ಪ್ರಶ್ನೆಗಳು ಎದುರಾಗುತ್ತವೆ:

ನಮ್ಮ ಇಂದ್ರಿಯಗಳೆಲ್ಲ ಕೆಲಸ ಮಾಡದೆ ಇರುವಾಗ ಹೊಸ ಅನುಭವಗಳನ್ನು ಪಡೆಯುವುದು ಹೇಗೆ ಸಾಧ್ಯ? ಏಕೆಂದರೆ ಮನಸ್ಸು ಕೂಡಾ ಇಂದ್ರಿಯಗಳ ನೆರವಿಲ್ಲದೆ ಹೊಸದನ್ನು ತಿಳಿಯಲಾರದು.

ಹಾಗೆಯೇ, ಎಷ್ಟೋ ಸಲ ನಾವು ಹಿಂದೆ ಅನುಭವಿಸಿರಲು ಸಾಧ್ಯವೇ ಇಲ್ಲದ ಸಂಗತಿಯನ್ನು ಕನಸಿನಲ್ಲಿ ಕಾಣುತ್ತೇವೆ. ಉದಾಹರಣೆಗೆ, ನಮ್ಮದೇ ತಲೆಯನ್ನು ಯಾರೋ ಕತ್ತರಿಸಿದಂತೆ ಕನಸಿನಲ್ಲಿ ಕಾಣುವುದು ಹಿಂದಿನ ಅನುಭವವಾಗಿರಲು ಹೇಗೆ ಸಾಧ್ಯ?

ಆದ್ದರಿಂದ ಕನಸು ಎನ್ನುವುದು ಹಳೆಯದರ ನೆನಪೋ ಅಥವಾ ಮನಸ್ಸಿನ ಸೃಷ್ಟಿಯೋ ಹೇಳುವುದು ಕಷ್ಟ. ಆದ್ದರಿಂದಲೇ ಕನಸುಗಳಿಗೂ, ಎಚ್ಚರದಲ್ಲಿ ನಾವು ಅನುಭವಿಸುವ ಭ್ರಮೆಗಳಿಗೂ ಹೋಲಿಕೆ ಇದೆ.

ಪ್ರಸಿದ್ಧ ವೈದ್ಯನಾದ ಚರಕನ ಪ್ರಕಾರ, ನಾವು ನಿದ್ದೆ ಮಾಡುವಾಗ ನಮ್ಮ ಮನಸ್ಸೇ ಹೊರಗಿನ ಇಂದ್ರಿಯಗಳಿಗೆ ದಾರಿ ತೋರಿಸುತ್ತದೆ. ಹಗುರನಿದ್ದೆಯಲ್ಲಿ ಕನಸುಗಳು ಬೀಳುತ್ತವೆ. ಚರಕನು ವಿಧವಿಧವಾದ ಕನಸುಗಳನ್ನು ವಿವರಿಸಿದ್ದಾನೆ. ಕೆಲವು ಕನಸುಗಳಲ್ಲಿ ಹಳೆಯ ನೆನಪುಗಳು ಹೊಸ ವಿಚಾರಗಳಂತೆ ಕಾಣಿಸಿಕೊಳ್ಳುತ್ತವೆ. ಕೆಲವು ಕನಸುಗಳಲ್ಲಿ ಮೂಲವಸ್ತು ನೆನಪಿನಿಂದ ಬಂದಿದ್ದರೂ, ಅವುಗಳಿಗೆ ರೆಕ್ಕೆಪುಕ್ಕ ಕಟ್ಟುತ್ತದೆ ಮನಸ್ಸು. ಮತ್ತೆ ಕೆಲವು ಕನಸುಗಳಲ್ಲಿ ಅಂತರಂಗದ ಆಸೆ ಪೂರೈಕೆಯಾಗುವುದನ್ನು ಕಾಣುತ್ತೇವೆ. ನಮ್ಮ ಶರೀರದ ಯಾವುದಾದರೂ ಒಂದು

ಭಾಗ ರೋಗದಿಂದ ನರಳುತ್ತಿದ್ದರೆ ಅದಕ್ಕೆ ಸಂಬಂಧಿಸಿದ ಕನಸು ಬರುವ ಸಾಧ್ಯತೆಯನ್ನೂ ಆತ ಹೇಳುತ್ತಾನೆ. ಕನಸುಗಳು ಭವಿಷ್ಯವನ್ನು ಸೂಚಿಸುವ ವಿಚಾರವನ್ನು ಬೆಳಕಿಗೆ ತಂದ ಚರಕನು ಸಾವು ಮತ್ತು ರೋಗವೂ ಕನಸಿನಲ್ಲಿ ಸೂಚಿತವಾಗುವುದೆಂದು ವಿವರಿಸಿದ್ದಾನೆ.

ಕನಸುಗಳ ಕಾರಣವನ್ನು ವಿವರಿಸುತ್ತಾ ನಾಗಸೇನ ಎನ್ನುವವನು ಮನುಷ್ಯ ಶರೀರದಲ್ಲಿರುವ ವಾತ, ಪಿತ್ಥ, ಕಫಗಳ ಪ್ರಮಾಣದಲ್ಲಿ ಏರುಪೇರಾದಾಗ ವಿಧವಿಧವಾದ ಕನಸುಗಳು ಬೀಳುತ್ತವೆಂದು ತಿಳಿಸಿದ್ದಾನೆ. ಈ ರೀತಿ ನಮ್ಮ ಭಾರತೀಯ ಚಿಂತಕರು ಬಹಳ ಹಿಂದೆಯೇ ಕನಸುಗಳ ಬಗ್ಗೆ ಅನೇಕ ವಿಷಯಗಳನ್ನು ಹೇಳಿದ್ದಾರೆ. ಕಳೆದ ನೂರು ವರ್ಷಗಳಲ್ಲಿ ಯೂರೋಪ್ ದೇಶದ ವಿಜ್ಞಾನಿಗಳು ಕಂಡು ಹಿಡಿದಿರುವ ವಿಚಾರಗಳಿಗೂ ನಮ್ಮವರ ವಿಚಾರಗಳಿಗೂ ಹೋಲಿಕೆ ಇದೆ. ಇನ್ನೂ ಮುಂದೆ ನಾವು ಪಶ್ಚಿಮದ ವಿದ್ವಾಂಸರ ವಿಚಾರಗಳನ್ನು ತಿಳಿದುಕೊಳ್ಳೋಣ.

ಪಾಶ್ಚಾತ್ಯರ ಕಣ್ಣಲ್ಲಿ ಕನಸು

ನಮ್ಮ ಹಾಗೆಯೇ ಬೇರೆ ದೇಶದ ಜನರೂ ಕೂಡಾ ಕನಸುಗಳು ಮುಂದೆ ಆಗುವುದನ್ನು ತಿಳಿಸುತ್ತವೆ ಎಂದು ನಂಬಿದ್ದರು. ಕನಸುಗಳ ಮೂಲಕ ದೇವತೆಗಳು ಮನುಷ್ಯರಿಗೆ ಸಂದೇಶ ಕೊಡುತ್ತಾರೆ. ನಿದ್ದೆ ಮಾಡುವ ಆತ್ಮವು ದೇಹದಿಂದ ಹೊರಗೆ ಹೋಗಿ ಬೇರೆ ಬೇರೆ ಅನುಭವ ಪಡೆಯುತ್ತದೆ ಮುಂತಾದ ವಿಚಾರಗಳು ನಮಗೂ ಅವರಿಗೂ ಸಮಾನ. ಆ ದೇಶಗಳ ಪುರಾಣಗಳಲ್ಲಿ ಮತ್ತು ಕಥೆಗಳಲ್ಲಿ ಕನಸಿನ ವಿಚಾರಗಳು ಬರುತ್ತವೆ.

ಕಾಲಕ್ರಮೇಣ ಈ ನಂಬಿಕೆಗಳು ಮಾಸಿಹೋಗಿ ವಿಜ್ಞಾನದ ಕಣ್ಣಲ್ಲಿ ಕನಸನ್ನು ನೋಡುವುದು ಆರಂಭವಾಯಿತು. ಯೂರೋಪ್ ಖಂಡದ ಬೇರೆ ಬೇರೆ

ದೇಶಗಳ ವೈದ್ಯರು ಮತ್ತು ಮನಸ್ಸಿನ ರೋಗಗಳನ್ನು ಗುಣಪಡಿಸುವವರು ಕನಸುಗಳ ಬಗ್ಗೆ ಪ್ರಯೋಗ ನಡೆಸಿದರು. ಹೊಸ ವಿಚಾರಗಳನ್ನು ಕಂಡುಹಿಡಿದರು.

ಹೀಗೆ ಕನಸುಗಳನ್ನು ಕುರಿತು ಆಲೋಚನೆ ಮಾಡಿದವರಲ್ಲಿ ಸಿಗ್ಮಂಡ್ ಫ್ರಾಯ್ಡ್ ಮುಖ್ಯನಾದವನು. ಇವನು ಆಸ್ಟ್ರಿಯಾ ದೇಶದ ಮನೋವೈದ್ಯ. ನಮ್ಮ ಮನಸ್ಸು, ಕನಸುಗಳು ಮತ್ತು ಮನೋರೋಗಗಳಿಗೆ ಇರುವ ಸಂಬಂಧ ಯಾವುದು ಎಂದು ಇವನು ಪ್ರಶ್ನೆ ಕೇಳಿಕೊಂಡನು. ಫ್ರಾಯ್ಡ್ ಪ್ರಕಾರ ಮನಸ್ಸಿನಲ್ಲಿ ಮೂರು ಭಾಗಗಳಿವೆ. ಅವುಗಳಿಗೆ ಎಚ್ಚರದ ಮನಸ್ಸು, ಅರೆ ಎಚ್ಚರದ ಮನಸ್ಸು ಮತ್ತು ಒಳಮನಸ್ಸು ಎಂಬ ಹೆಸರು ಕೊಡಲಾಗಿದೆ. ಎಚ್ಚರದ ಮನಸ್ಸಿಗೆ ಮನುಷ್ಯನ ಪ್ರತಿದಿನದ ಜೀವನದಲ್ಲಿ ನಡೆಯುವ ಕ್ರಿಯೆಗಳು, ವಿಚಾರಗಳು, ಮತ್ತು ಅನುಭವಗಳು ಗೊತ್ತಿರುತ್ತವೆ. ಹೀಗೆ ಗೊತ್ತಾದ ಸಂಗತಿಗಳಲ್ಲಿ 'ಕೆಲವು' ನಿಧಾನವಾಗಿ ಅರೆಎಚ್ಚರದ ಮನಸ್ಸಿಗೆ ಜಾರುತ್ತವೆ. ಆದರೆ ಮನುಷ್ಯನಿಗೆ ತಲ್ಲಣ ಉಂಟುಮಾಡುವ, ಹಿಂಸೆ ಮತ್ತು ನೋವುಂಟುಮಾಡುವ ಸಂಗತಿಗಳು ಇನ್ನೂ ಕೆಳಗೆ ಅದುಮಲ್ಪಟ್ಟು ಒಳಮನಸ್ಸಿನಲ್ಲಿ ಸೇರಿಕೊಳ್ಳುತ್ತವೆ. ಎಷ್ಟೇ ಪ್ರಯತ್ನ ಪಟ್ಟರೂ ಈ ಸಂಗತಿಗಳು ಮರಳಿ ನೆನಪಿಗೆ ಬರುವುದಿಲ್ಲ. ಆದರೆ ಹೀಗೆ ಒಳಸೇರಿದ ವಿಷಯಗಳಿಗೆ ಒಂದು 'ಹೊರದಾರಿ' ಇದೆ. ಇವೇ ಕನಸುಗಳು. ಆದ್ದರಿಂದ ಫ್ರಾಯ್ಡ್ "ಕನಸುಗಳು ನಮ್ಮನ್ನು ಒಳಮನಸ್ಸಿಗೆ ಕರೆದುಕೊಂಡು ಹೋಗುವ ದಾರಿ" ಎಂದು ಕರೆದಿದ್ದಾನೆ. ಅವನ ಪ್ರಕಾರ ಕನಸುಗಳು ಅರ್ಥಹೀನವಾದುವಲ್ಲ. ಅವು ಒಳಮನಸ್ಸು ಕೆಲಸ ಮಾಡುವ ರೀತಿಯನ್ನು ತಿಳಿಸುತ್ತವೆ.

ನಾವು ಎಚ್ಚರದ ಸ್ಥಿತಿಯಲ್ಲಿರುವಾಗ ಅದುಮಿಟ್ಟ ಅಹಿತಕರವಾದ ಸಂಗತಿಗಳು ಮನಸ್ಸಿಗೆ ತಲುಪದಂತೆ ಮಾಡಲು ಅನೇಕ ತಡೆಗಳು ಇರುತ್ತವೆ. ಕನಸು ಕಾಣುವ ಅವಧಿಯಲ್ಲಿ ಆ ತಡೆಗಳ ಹಿಡಿತ ಸಡಿಲವಾಗುತ್ತದೆ. ಆಗ ಒಳಮನದಲ್ಲಿ ಹುದುಗಿಟ್ಟ ಆಸೆಗಳು, ಹೊಯ್ದಾಟಗಳು, ಘರ್ಷಣೆಗಳು ಹೊರಗೆ ಪ್ರಕಟವಾಗುವ ಅವಕಾಶ ದೊರಕುತ್ತದೆ. ಕನಸಿನಲ್ಲಿ "ಈಡೇರದ ಬಯಕೆಗಳು

ನನಸಾಗುತ್ತವೆ'' ಎಂದು ಫ್ರಾಯ್ಡ್ ವಾದಿಸಿದ್ದಾನೆ. ಇಂತಹ ಬಹುಪಾಲು ಕನಸುಗಳು ದ್ವೇಷ ಮತ್ತು ಗಂಡು ಹೆಣ್ಣಿನ ಲೈಂಗಿಕ ಸಂಬಂಧವನ್ನು ಕುರಿತು ಇರುತ್ತವೆ. ಎಷ್ಟೋ ಸಲ ಕನಸುಗಳು ಅವನ್ನು ಕಾಣುತ್ತಿರುವವನಿಗೆ ಅರ್ಥವಾಗುವುದಿಲ್ಲ. ಏಕೆಂದರೆ ಒಳಮನಸ್ಸಿನ ಸಂಗತಿಗಳು ಕನಸಿನಲ್ಲಿ 'ಮಾರುವೇಷ' ಹಾಕಿಕೊಂಡು ಬಂದಿರುತ್ತವೆ. ಎಂದರೆ ಅವು ಸಂಕೇತಗಳ ರೂಪದಲ್ಲಿ ಬಂದಿರುತ್ತವೆ. ಹೀಗೇ ಎಚ್ಚರದ ಸ್ಥಿತಿಯಲ್ಲಿ ಹೊರಬರಲಾರದ ಸಂಗತಿಗಳು ಕನಸಿನ ಮೂಲಕ ಹೊರಬಂದು ಮನಸ್ಸಿನ ಆರೋಗ್ಯವನ್ನು ಕಾಪಾಡುತ್ತವೆ.

ಫ್ರಾಯ್ಡ್ ಮಾತ್ರವಲ್ಲದೆ ಕಾರ್ಲ್‌ಯೂಂಗ್ ಹಾಗೂ ಆ್ಯಡ್ಲರ್ ಎಂಬ ಮನೋವಿಜ್ಞಾನಿಗಳು ಕನಸುಗಳ ಬಗ್ಗೆ ಮುಖ್ಯ ವಿಚಾರಗಳನ್ನು ಮಂಡಿಸಿದ್ದಾರೆ. ಯೂಂಗ್ ಮೊದಲು ಫ್ರಾಯ್ಡ್ ಜೊತೆಯಲ್ಲಿ ಕೆಲಸ ಮಾಡುತ್ತಿದ್ದು ನಂತರ ತಾನೊಬ್ಬನೇ ಕೆಲಸ ಮಾಡಿದನು. ಅವನು ಕೆಲವು ವಿಚಾರಗಳಲ್ಲಿ ಫ್ರಾಯ್ಡ್‌ಗಿಂತ ಭಿನ್ನವಾಗಿ ಆಲೋಚಿಸಿದ್ದಾನೆ. ಆತನ ಪ್ರಕಾರ ಸಂಕೇತಗಳ ಉದ್ದೇಶ, ಒಳಗೆ ಅಡಗಿದ ಅರ್ಥವನ್ನು ಮುಚ್ಚಿಡುವುದಲ್ಲ. ಕನಸಿನೊಳಗಿನ ಚಿತ್ರಸಂಕೇತ ಏನು ಹೇಳುತ್ತದೆಯೋ ಅಷ್ಟೇ ಅದರ ಅರ್ಥ. ಯೂಂಗ್ ಪ್ರಕಾರ ಎಲ್ಲ ಕನಸುಗಳೂ ಲೈಂಗಿಕತೆ ಅಥವಾ ಹಿಂಸೆಯನ್ನು ಮೂಲವಾಗಿ ಹೊಂದಿರುವುದಿಲ್ಲ. ಆತನ ಪ್ರಕಾರ ಬಗೆ ಬಗೆಯ 'ವಸ್ತು'ಗಳನ್ನು ಹೊಂದಿರುವ ಕನಸುಗಳಿರುತ್ತವೆ.

ಈ ಮೂವರ ನಂತರ ಕೂಡಾ ಕನಸುಗಳ ಬಗ್ಗೆ ಅನೇಕ ಸಂಶೋಧನೆಗಳು ನಡೆದಿವೆ.

ಇದುವರೆಗೆ ಕನಸುಗಳನ್ನು ಕುರಿತು ವಿಚಾರಗಳನ್ನು ಹೇಳಿದ್ದೇವೆ. ಇವುಗಳನ್ನು ನಾನು ಓದಿದ್ದು ಮತ್ತು ಸಂಗ್ರಹಿಸಿದ್ದು ನನ್ನ ಮಗಳು ಮಂಗಳೆಯ ಕನಸುಗಳ ಬಗ್ಗೆ ನನಗೆ ಹುಟ್ಟಿದ ಕುತೂಹಲದಿಂದ. ಅವಳ ಕನಸನ್ನು ಬಿಡಿಸಿ ನೋಡುವುದರಿಂದ ನನ್ನ ಕುತೂಹಲವನ್ನು ತಣಿಸಿದಂತೆ ಆಗುತ್ತದೆ. ಅವಳಿಗೆ ಆನಂದ ತಂದ, ಆತಂಕ ತಂದ ವಿಚಾರಗಳನ್ನು ತಿಳಿದುಕೊಂಡಂತೆಯೂ ಆಗುತ್ತದೆ.

ನನ್ನ ಮಗಳ ಪುಟ್ಟ ಪ್ರಪಂಚದಲ್ಲಿ ಪುಸ್ತಕಗಳದೇ ರಾಜ್ಯಭಾರ. ಅದರೊಳಗೆ ರಾಜರಾಣಿಯರ ಕಾರುಬಾರೇನು... ಸೇವಕ, ಭಟರ ಗಡಿಬಿಡಿಯೇನು... ಹೂ, ಚಿಟ್ಟೆಗಳ ಸಂಭ್ರಮ ಏನು.. ಹಣ್ಣು ಕಾಯಿಗಳ ರುಚಿ ಏನು... ಕಾಗೆ, ಗುಬ್ಬಿಗಳ ಹಾರಾಟವೇನು... ರಾಕ್ಷಸ, ಮಾಟಗಾತಿಯರ ಹುಯಿಲೇನು... ಅವಳು ಈ ಲೋಕದಲ್ಲೇ ಬೆಳಗಿನಿಂದ ರಾತ್ರಿಯವರೆಗೆ ಮುಳುಗಿ ತೇಲುತ್ತಾಳೆ. ಅವಳು, ಮೊದಲ ಕನಸು ಕಂಡ ರಾತ್ರಿ, ಹಗಲಿನ ಕಥೆಗಳ ಲೋಕದಿಂದ, ನಿದ್ದೆಯೊಳಗಿನ ಕನಸಿನಲೋಕಕ್ಕೆ ಪಾದ ಬೆಳೆಸಿರಬೇಕು. ಮಂಗಳೆಯ ಮನಸ್ಸಿನಲ್ಲಿದ್ದ ವಿಚಾರ - ಒಳ್ಳೆಯ ಕೆಲಸಕ್ಕೆ ಪ್ರತಿಯಾಗಿ ಒಳ್ಳೆಯ ಬಹುಮಾನ ಸಿಗುತ್ತದೆ ಎಂಬುದು- ಕನಸಿನಿಂದ ಗೊತ್ತಾಗುತ್ತದೆ. ಗಿಳಿಯ ರೆಕ್ಕೆಗೆ ಚುಚ್ಚಿಕೊಂಡಿದ್ದ ಮುಳ್ಳು ತೆಗೆದುದರಿಂದ ಹಣ್ಣು ಸಿಕ್ಕಿತು. ನಿದ್ದೆಮಾಡುವ ಮುಂಚೆ ಊಟಮಾಡದೆ ಹಸಿದುಕೊಂಡೇ ಮಲಗಿದ್ದ ಅವಳಿಗೆ ಕನಸಿನ ತುಂಬ ಹಣ್ಣುಗಳೇ ಕಂಡಿದ್ದು ಸಹಜ.

ಅವಳ ಎರಡನೆಯ ಕನಸು ಅಣ್ಣನ ಬಗ್ಗೆ ಅವಳ ಮನಸ್ಸಿನಲ್ಲಿ ತುಂಬಿರುವ ಭಯ ಮತ್ತು ಆತಂಕಗಳನ್ನು ಹೇಳುತ್ತದೆ. ಅವಳ ಮನಸ್ಸಿನಲ್ಲಿ 'ರಾಕ್ಷಸ' ಹಿಂಸೆ ಮತ್ತು ಕ್ರೂರತೆಗೆ ಸಂಕೇತವೆಂಬ ವಿಚಾರ ಪುಸ್ತಕಗಳ ಓದಿನಿಂದ ಬೆಳೆದುಬಂದಿದೆ. ಆ ದಿನ ಶಾಲೆಯಿಂದ ಬರುವಾಗ ತೊಂದರೆ ಕೊಟ್ಟ ಅಣ್ಣನನ್ನು ಅವಳ ಒಳಮನಸ್ಸು ರಾಕ್ಷಸನನ್ನಾಗಿ ಬದಲಾಯಿಸಿ ಕನಸಿನಲ್ಲಿ ತಂದಿದೆ. ಅಣ್ಣನ ಈ ನಡತೆಯನ್ನು ಅವಳು ಅನೇಕ ಬಾರಿ ಅನುಭವಿಸಿರುವುದರಿಂದ ಅದು ಆಳವಾದ ಪ್ರಭಾವ ಬೀರಿದೆ.

ಮಂಗಳೆಯ ಕನಸುಗಳ ಬಗ್ಗೆ ತಿಳಿದುಕೊಂಡರೆ ಸಾಲದು. ನಾವು ನಮ್ಮದೇ ಕನಸುಗಳನ್ನು ಕುರಿತು ಆಲೋಚಿಸಬೇಕು. ಅವು ಕೊಡುವ ಸೂಚನೆಗಳನ್ನು ಅರ್ಥಮಾಡಿಕೊಳ್ಳಬೇಕು, ಅನುಸರಿಸಬೇಕು. ಆಗ ನಮ್ಮ ಮನಸ್ಸಿನ ಆರೋಗ್ಯ ಇನ್ನಷ್ಟು ಉತ್ತಮವಾಗುತ್ತದೆ.

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರಧಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು